# ಅಧ್ಯಾಯ - ೧೧

## ಇತರ ಇಲಾಖೆಗಳು

ಸ್ವಾತಂತ್ರ್ಯಾನಂತರದ ಪ್ರಜಾ ಪ್ರಭುತ್ವ ವ್ಯವಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಗಳು ಜನತೆಯ ಅಶೋತ್ತರಗಳಿಗೆ ಸ್ಪಂದಿಸುವ ದಿಶೆಯಲ್ಲಿ ಕಾಲಕಾಲಕ್ಕೆ ಪ್ರಗತಿಪರ ಯೋಜನೆಗಳನ್ನು ರೂಪಿಸಿಕೊಂಡು ಅವುಗಳಿಗನುಗುಣವಾಗಿ ತನ್ನ ಆಡಳಿತ ರೀತಿ ನೀತಿಗಳನ್ನು ಪುನರ್ ರೂಪಿಸುತ್ತಾ ಬಂದಿವೆ.

ಗುಲಬರ್ಗಾ ನಗರವು ಜಿಲ್ಲಾ ಕೇಂದ್ರ ಮತ್ತು ವಿಭಾಗೀಯ ಕೇಂದ್ರವು ಆಗಿದ್ದು, ವಿಭಾಗ ಮಟ್ಟದ ಕಾರ್ಯಾಲಯಗಳು ಸಹ ಇಲ್ಲಿ ಕಾರ್ಯ ನಿರ್ವಹಿಸುತ್ತಿವೆ. ನಿಜಾಮ ಸರ್ಕಾರದಲ್ಲಿ ಪ್ರಾರಂಭಗೊಂಡ ಹಲವಾರು ಇಲಾಖೆಗಳು ಸೂಕ್ತ ಬದಲಾವಣೆಯೊಂದಿಗೆ ರಾಜ್ಯ ಪುನರ್ ರಚನೆಯ ನಂತರವೂ ಮುಂದುವರೆದಿವೆ. ಹಲವಾರು ಇಲಾಖೆಗಳು ೧೯೫೬ರ ನಂತರ ಜಿಲ್ಲೆಯಲ್ಲಿ ಪ್ರಾರಂಭಗೊಂಡಿವೆ. ಆಡಳಿತದಲ್ಲಿ ಹೆಚ್ಚು ಹೆಚ್ಚು ವಿಕೇಂದ್ರೀಕರಣ ಸಾಧಿಸಲು ಸಹಾಯಕವಾಗುವಂತೆ ಜಿಲ್ಲಾ ಆಡಳಿತವನ್ನು ರೂಪಿಸಲಾಗುತ್ತಿದೆ. ಜಿಲ್ಲೆಯ ವ್ಯಾಪ್ತಿಗೆ ಒಳಪಟ್ಟಂತೆ ಎಲ್ಲಾ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಇಲಾಖೆಗಳಿಗೆ ಸರ್ಕಾರದ ನಿರ್ದೇಶನದಂತೆ ಹತ್ತು ಹಲವು ಜನ ಕಲ್ಯಾಣ ಯೋಜನೆಗಳನ್ನು ರೂಪಿಸುವುದು ಹಾಗೂ ಅವುಗಳನ್ನು ಅನುಷ್ಠಾನಗೊಳಿಸುವಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಆಡಳಿತ ಯಂತ್ರವನ್ನು ಪುನರ್ ರೂಪಿಸುತ್ತಾ ಬಂದಿವೆ. ಜಿಲ್ಲಾಧಿಕಾರಿಗಳ ಆಡಳಿತ ವ್ಯಾಪ್ತಿಗೆ ಒಳಪಡದ ಹಲವಾರು ಜಿಲ್ಲಾ ಮಟ್ಟದ, ವಿಭಾಗಮಟ್ಟದ ಇಲಾಖಾ ಕಛೇರಿಗಳು, ಮಂಡಳಿಗಳು ಹಾಗೂ ನಿಗಮಗಳ ಉದ್ದೇಶ, ಬೆಳವಣಿಗೆ, ಕಾರ್ಯಚಟುವಟಿಕೆ ಇವೇ ಮುಂತಾದ ಮಾಹಿತಿಗಳ ಸಂಕ್ಷಿಪ್ತ ಚಿತ್ರಣವನ್ನು ಈ ಅಧ್ಯಾಯ ಒಳಗೊಂಡಿದೆ.

### ಅಬಕಾರಿ ಇಲಾಖೆ

ಅಬಕಾರಿ ವಸ್ತುಗಳ ಬಳಕೆ, ಕಾನೂನು ಬಾಹಿರ ಚಟುವಟಿಕೆಗಳ ನಿಯಂತ್ರಣ ಹಾಗೂ ಅಬಕಾರಿ ವರಮಾನ ಹೆಚ್ಚಳದ ಉದ್ದೇಶದಿಂದ ಅಬಕಾರಿ ಅಧೀಕ್ಷಕರ ಕಾರ್ಯಾಲಯವು ೧೯೫೬ಕ್ಕಿಂತಲೂ ಮೊದಲೇ ಗುಲಬರ್ಗಾದಲ್ಲಿ ಅಸ್ತಿತ್ವವನ್ನು ಪಡೆದಿದೆ. ಅಬಕಾರಿ ಅಧೀಕ್ಷಕರು ಕಛೇರಿಯ ಮುಖ್ಯಸ್ಥರಾಗಿದ್ದು ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿರುವರು. ಕರ್ನಾಟಕ ರಾಜ್ಯ ಅಬಕಾರಿ ಕಾಯ್ದೆ ೧೯೬೫, ಎಸ್.ಡಿ.ಪಿ.ಎಸ್. ಕಾಯ್ದೆ, ಒಪಿಯಮ್ ಕಾಯ್ದೆ ಮುಂತಾದ ನಿಯಮಗಳನ್ನು ಈ ಕಛೇರಿ ತನ್ನ ಕೆಲಸಗಳಲ್ಲಿ ಅನ್ವಯಗೊಳಿಸುತ್ತದೆ. ಆಧೀನದಲ್ಲಿ ತಾಲೂಕು ಮಟ್ಟದ ವಲಯ ಹಾಗೂ ಉಪ-ವಲಯ

ಕಾರ್ಯಾಲಯಗಳಲ್ಲಿ ಅಬಕಾರಿ ನಿರೀಕ್ಷಕರ ಮುಖ್ಯಸ್ತಿಕೆಯಲ್ಲಿ ಇತರ ಸಿಬ್ಬಂದಿಯೊಂದಿಗೆ ಕಾರ್ಯನಿರ್ವಹಣೆಯಾಗುತ್ತದೆ. ಅಬಕಾರಿ ಉಪ-ಆಯುಕ್ತರು ಗುಲಬರ್ಗಾ, ಇವರು ಮೇಲಾಧಿಕಾರಿಗಳಾಗಿರುತ್ತಾರೆ.

## ಅರಣ್ಯ ಇಲಾಖೆ

ಉಪ-ಅರಣ್ಯ ಸಂರಕ್ಷಣಾಧಿಕಾರಿಗಳು ಸಾಮಾಜಿಕ ಅರಣ್ಯ ವಿಭಾಗ ಇವರ ಕಾರ್ಯಾಲಯವು ಗುಲಬರ್ಗಾದಲ್ಲಿ ೧೯೮೪ರಲ್ಲಿ ಪ್ರಾರಂಭಗೊಂಡಿತು. ೧೯೮೭ರ ವರೆಗೆ ಅರಣ್ಯ ಇಲಾಖೆಯ ಆಡಳಿತದಲ್ಲಿದ್ದ ಈ ವಿಭಾಗ ೧೯೮೭ರಿಂದ ಜಿಲ್ಲಾ ಪಂಚಾಯತ್ ಅಧೀನದಲ್ಲಿದೆ. ಉಪ-ಅರಣ್ಯ ಸಂರಕ್ಷಣಾಧಿಕಾರಿಗಳು ಕಾರ್ಯಾಲಯದ ಮುಖ್ಯಸ್ಥರಾಗಿದ್ದು ಅವರ ನೆರವಿಗೆ ಇಬ್ಬರು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ೧೧ ವಲಯ (ರೇಂಜ್) ಅರಣ್ಯಾಧಿಕಾರಿಗಳು ಹಾಗೂ ಇನ್ನಿತರ ೧೩೪ ಜನ ಸಿಬ್ಬಂದಿ ವರ್ಗವಿದೆ. ಗ್ರಾಮೀಣ ಜನರಿಗೆ ಅಗತ್ಯವಿರುವ ಸಣ್ಣ ಮರ, ಉರುವಲು ಕಟ್ಟಿಗೆ, ಇತ್ಯಾದಿಗಳನ್ನು ಪೂರೈಸಲು ಅನುಕೂಲವಾಗುವಂತೆ ಗೋಮಾಳ 'ಸಿ' ಮತ್ತು 'ಡಿ' ಜಮೀನು, ಕೆರೆ ಅಂಗಳ, ರಸ್ತೆ ಬದಿ, ಇತ್ಯಾದಿ ಪ್ರದೇಶಗಳಲ್ಲಿ ಗಿಡಮರಗಳನ್ನು ಬೆಳೆಸುವುದು ಸಾಮಾಜಿಕ ಅರಣ್ಯ ವಿಭಾಗದ ಉದ್ದೇಶವಾಗಿದೆ. ೧೯೯೪-೯೫ನೇ ಸಾಲಿನಲ್ಲಿ ೧,೬೧೭.೫ ಹೆಕ್ಟೇರ್ ಪ್ರದೇಶದಲ್ಲಿ ತೋಪುಗಳನ್ನು ಬೆಳೆಸಲಾಗಿದ್ದು ೨.೫೫ ಲಕ್ಷ ಸಸಿಗಳನ್ನು ಸಾರ್ವಜನಿಕರಿಗೆ ಹಂಚಿದೆ. ಅರಣ್ಯ ಸಂರಕ್ಷಿಸುವುದು, ಅಭಿವೃದ್ಧಿಪಡಿಸುವುದು, ವನ್ಯಜೀವಿಗಳ ಸಂರಕ್ಷಣೆ, ಮುಂತಾದ ಉದ್ದೇಶಗಳಿಂದ ವಿಭಾಗೀಯ ಅರಣ್ಯಾಧಿಕಾರಿಗಳ ಕಛೇರಿಯು ೧೯೫೬ರಲ್ಲಿ ಸ್ಥಾಪನೆಗೊಂಡಿದ್ದು ಮುಂದೆ ೧೯೮೦ ರಲ್ಲಿ ಹುದ್ದೆಯು ಉಪ-ಅರಣ್ಯ ಸಂರಕ್ಷಣಾಧಿಕಾರಿಗಳು ಪ್ರಾದೇಶಿಕ ಅರಣ್ಯ ವಿಭಾಗ, ಗುಲಬರ್ಗಾ ಎಂದು ಬದಲಾವಣೆ ಹೊಂದಿತು. ಚಿಂಚೋಳಿ ತಾಲೂಕಿನ ಕೆಲವು ಭಾಗಗಳನ್ನು ಹೊರತುಪಡಿಸಿ ಜಿಲ್ಲೆಯ ಎಲ್ಲಾ ತಾಲೂಕುಗಳ ಅಧಿಕಾರ ವ್ಯಾಪ್ತಿಯನ್ನು ಈ ಕಾರ್ಯಾಲಯ ಹೊಂದಿದೆ. ಕರ್ನಾಟಕ ಅರಣ್ಯ ಕಾಯ್ದೆ ೧೯೬೩ ಹಾಗೂ ನಿಯಮಗಳು (ರೂಲ್ಸ್) ೧೯೬೯, ಕರ್ನಾಟಕ ಅರಣ್ಯ ಕೈಪಿಡಿ (ಮ್ಯಾನುಅಲ್) ೧೯೭೬, ಕರ್ನಾಟಕ ಮರಗಳ ಸಂರಕ್ಷಣಾ ಕಾಯ್ದೆ ೧೯೭೬, ವನ್ಯಜೀವಿ ಸಂರಕ್ಷಣೆ ಕಾನೂನು ೧೯೭೨, ಅರಣ್ಯ ಸಂರಕ್ಷಣೆ ಕಾಯ್ದೆ ೧೯೮೦ ಮುಂತಾದ ನಿಯಮ, ಅಧಿನಿಯಮಗಳನ್ನು ಈ ಕಾರ್ಯಾಲಯ ಅನ್ವಯಗೊಳಿಸುತ್ತಿದೆ. ಸಾಮಾಜಿಕ ಅರಣ್ಯ (ರಾಜ್ಯ) ಕೇಂದ್ರ ಪರಿಷ್ಕೃತ ಪ್ರದೇಶಾಧಾರಿತ ಉರುವಲು ಮತ್ತು ಮೇವು ಯೋಜನೆ, ನಗರ ಪ್ರದೇಶದ ಹಸಿರು ನಿರ್ಮಾಣ, ಕೆ.ಎಫ್.ಡಿ.ಎಫ್. ೩೦, ರಸ್ತೆಬದಿ ನೆಡುತೋಪು, ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆ ಮುಂತಾದ ಯೋಜನೆಗಳನ್ನು ಈ ಕಾರ್ಯಾಲಯ ಅನುಷ್ಠಾನಗೊಳಿಸುತ್ತಿದೆ. ಅಧೀನ ಕಛೇರಿಗಳು, ಗುಲಬರ್ಗಾ, ಚಿಂಚೋಳಿ, ಯಾದಗಿರಿ, ಸುರಪುರ ಹಾಗೂ ಆಳಂದಗಳಲ್ಲೂ ಇದು ವಲಯ ಅರಣ್ಯಾಧಿಕಾರಿಗಳ ನೇತೃತ್ವದಲ್ಲಿ ಕಾರ್ಯನಿರ್ವಹಿಸುತ್ತಿದೆ. ಅರಣ್ಯ ಸಂರಕ್ಷಣಾಧಿಕಾರಿಗಳು, ಬಳ್ಳಾರಿ ವೃತ್ತ ಇವರು ತಕ್ಷಣದ ಮೇಲಾಧಿಕಾರಿಗಳಾಗಿರುತ್ತಾರೆ.

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ರಾಷ್ಟ್ರೀಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನ ಹಾಗೂ ತಾಂತ್ರಿಕ ಮೇಲ್ವಿಚಾರಣೆ ಉದ್ದೇಶದಿಂದ ಸಹ-ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಇವರ ವಿಭಾಗೀಯ ಕಾರ್ಯಾಲಯವು ೧೯೭೨ ರಲ್ಲಿ ಗುಲಬರ್ಗಾದಲ್ಲಿ ಪ್ರಾರಂಭಗೊಂಡಿತು. ಪ್ರಾರಂಭದಲ್ಲಿ ಮುಖ್ಯಸ್ಥರ ಹುದ್ದೆಯ ಹೆಸರು ಪ್ರಾದೇಶಿಕ ಉಪ-ನಿರ್ದೇಶಕರು ಕುಟುಂಬ ಯೋಜನಾ ಸೇವೆಗಳು ಈಗಿರುವಂತೆ ಸಹ-ನಿರ್ದೇಶಕರು ಎಂದಾಯಿತು. ಪ್ರಾರಂಭದಿಂದಲೂ ಇದು ಒಂದು ಸ್ವತಂತ್ರ ಇಲಾಖೆಯಾಗಿ ಕಾರ್ಯನಿರ್ವಹಿಸುತ್ತಿದೆ. ವಿಭಾಗೀಯ ಸಹ-ನಿರ್ದೇಶಕರು ಆರೋಗ್ಯ ಸಂಸ್ಥೆಗಳ (ಜಿಲ್ಲಾ ಆಸ್ಪತ್ರೆ, ಗುಲಬರ್ಗಾ, ಬಳ್ಳಾರಿ ಹೊರತುಪಡಿಸಿ) ಆಡಳಿತಾತ್ಮಕ ನಿಯಂತ್ರಣವನ್ನು ಹೊಂದಿರುವರು.

ಜಿಲ್ಲಾ ಆಸ್ಪತ್ರೆ ಬೀದರ್, ರಾಯಚೂರು, ಹೊಸಪೇಟೆ, ಉಪ-ನಿರ್ದೇಶಕರು ರಾಷ್ಟ್ರೀಯ ಮಲೇರಿಯಾ ನಿರ್ಮೂಲನಾ ಯೋಜನೆ ಗುಲಬರ್ಗಾ, ಪ್ರಾಂಶುಪಾಲರು, ಪ್ರಾದೇಶಿಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ತರಬೇತಿ, ಗುಲಬರ್ಗಾ, ಮಾದರಿ, ವೀಕ್ಷಣೆ ಹಾಗೂ ಮೌಲ್ಯಮಾಪನ ಘಟಕ, ಗುಲಬರ್ಗಾ, ಕುಷ್ಠರೋಗ ಪುನರ್ವಸತಿ ವಿಭಾಗೀಯ ಕಾರ್ಯಾಲಯಗಳ ವಿಶ್ಲೇಷಕರು ಹಾಗೂ ಪ್ರಾದೇಶಿಕ ಸಹಾಯಕ. ಪರಿಶೀಲನಾ ಅಧಿಕಾರಿಗಳ ಜವಾಬ್ದಾರಿಗಳು ಈ ಕಾರ್ಯಾಲಯದ್ದಾಗಿವೆ.

ಸಹ-ನಿರ್ದೇಶಕರ ನೆರವಿಗೆ ಉಪ-ನಿರ್ದೇಶಕರು, ದಂತ ವೈದ್ಯಾಧಿಕಾರಿಗಳು, ನೇತ್ರ ವೈದ್ಯಾಧಿಕಾರಿಗಳು, ಪತ್ರಾಂಕಿತ ಸಹಾಯಕರು ಹಾಗೂ ಮೂವರು ಅಧೀಕ್ಷಕರು ಮತ್ತು ಇನ್ನಿತರ ೩೪ ಜನ ಸಿಬ್ಬಂದಿ ವರ್ಗವಿದೆ. ಜನಸಂಖ್ಯೆ ಯೋಜನೆ ಒಂಬತ್ತರ ಅಡಿಯಲ್ಲೂ ಹೈದರಾಬಾದ್ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿ, ಆರೋಗ್ಯ ವಲಯ ಕಾರ್ಯಕ್ರಮಗಳ ಅನುಷ್ಠಾನ, ಶುಶ್ರೂಷ ಕಾರ್ಯಕ್ರಮ, ಮಿದುಳು ಜ್ವರ, ಪರಿಶಿಷ್ಟ ಜಾತಿ/ಪಂಗಡದ ಜನರಿಗೆ ಹೆಚ್ಚಿನ ವೈದ್ಯಕೀಯ ಸೌಲಭ್ಯ ಮೊದಲಾದ ಯೋಜನೆಗಳನ್ನು ಈ ಕಛೇರಿ ಕಾರ್ಯಗತಗೊಳಿಸುತ್ತದೆ. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರು ತತ್‌ಕ್ಷಣದ ಮೇಲಾಧಿಕಾರಿಗಳಾಗಿರುತ್ತಾರೆ.

## ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ

ಜಿಲ್ಲೆಯ ವಿವಿಧ ಇಲಾಖೆಗಳಿಗೆ ಸಂಬಂಧಿಸಿದ ಕಛೇರಿಗಳಿಂದ ಅಂಕಿ-ಅಂಶಗಳ ಸಂಗ್ರಹಣೆ ಹಾಗೂ ಪ್ರಕಟಣೆಯ ಉದ್ದೇಶ ಹೊಂದಿದ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿಯು ಗುಲಬರ್ಗಾದಲ್ಲಿ ೧೯೫೪ ರಲ್ಲಿ ಪ್ರಾರಂಭಗೊಂಡಿತು. ಅಂಕಿ ಅಂಶಗಳ ಮಾಹಿತಿ ಸಂಗ್ರಹಿಸಿ ಸರ್ಕಾರಕ್ಕೆ ಪೂರೈಸುವುದು, ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳಿಂದ ಯೋಜಿಸುವ ಸಮೀಕ್ಷೆಗಳಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳುವುದು ಹಾಗೂ ಪ್ರಕಟಣೆಗಳನ್ನು ಹೊರತರುವುದು, ವೃಷ್ಟಿ ಮಾಪಕ ಕೇಂದ್ರಗಳ ಸ್ಥಾಪನೆಗೆ ಅನುಮತಿ ನೀಡುವುದು, ವಿವಿಧ ಇಲಾಖೆಗಳ ಸೇವಾವಧಿ ತರಬೇತಿಗಳಲ್ಲಿ ಅಂಕಿ ಅಂಶಗಳ ಪಾತ್ರದ ಬಗ್ಗೆ ತರಬೇತಿ ನೀಡುವುದು, ಜನನ ಮರಣ ನೊಂದಣಿ ಕಾರ್ಯ ಮುಂತಾದ ಕಾರ್ಯ ಚಟುಟಿಕೆಗಳನ್ನು ಈ ಕಾರ್ಯಾಲಯ ನಡೆಸುತ್ತಿದೆ. ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಕಛೇರಿಯ ಮುಖ್ಯಾಧಿಕಾರಿಯಾಗಿದ್ದು ಅವರ ನೆರವಿಗೆ ೩೯ ಜನ ಸಹಾಯಕ ಸಿಬ್ಬಂದಿ ವರ್ಗವಿದೆ. ಜನನ ಮರಣ ನೊಂದಣಿ ಅಧಿನಿಯಮ ೧೯೬೯ನ್ನು ಈ ಕಛೇರಿ ಅನ್ವಯಗೊಳಿಸುತ್ತಿದೆ. ಬೆಳೆ ಅಂದಾಜು ಸಮೀಕ್ಷೆಯ ಸಕಾಲಿಕ ವರದಿ, ಜಿಲ್ಲೆಯ ಅಂಕಿ-ಅಂಶಗಳ ಪ್ರಕಟಣೆ ಕಾರ್ಯ ಯೋಜನೆಗಳನ್ನು ಕಾರ್ಯಗತಗೊಳಿಸುತ್ತಿದೆ. ಕಾರ್ಯಾಲಯದ ಆಡಳಿತಕ್ಕೆ ಒಳಪಟ್ಟಂತೆ ಸಾಂಖ್ಯಿಕ ನಿರೀಕ್ಷಕರು ತಾಲೂಕು ಮಟ್ಟದಲ್ಲಿ ಸಾಂಖ್ಯಿಕ ನಿರೀಕ್ಷಕರು ಕಾರ್ಯನಿರ್ವಹಿಸುತ್ತಿರುವುದು.

## ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ

ಜಿಲ್ಲೆಯ ನಾಗರಿಕರಿಗೆ ಅವರ ದಿನನಿತ್ಯದ ಅವಶ್ಯಕ ವಸ್ತುಗಳನ್ನು ಒದಗಿಸುವ ಉದ್ದೇಶದಿಂದ ಉಪ-ನಿರ್ದೇಶಕರು, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಜಿಲ್ಲಾ ಮಟ್ಟದ ಕಛೇರಿಯು ಗುಲಬರ್ಗಾದಲ್ಲಿ ೧೯೮೫ ರಲ್ಲಿ ಪ್ರಾರಂಭಗೊಂಡಿದೆ. ಇದಕ್ಕೂ ಪೂರ್ವದಲ್ಲಿ ಜಿಲ್ಲಾಧಿಕಾರಿಗಳ ಆಹಾರ ಸಹಾಯಕರ ನೇತೃತ್ವದಲ್ಲಿ ಈ ಕಾರ್ಯವು ನಿರ್ವಹಿಸಲ್ಪಡುತ್ತಿತ್ತು. ಆವಶ್ಯಕ ವಸ್ತುಗಳಾದ ಆಹಾರಧಾನ್ಯ, ಸಕ್ಕರೆ, ಸೀಮೆ ಎಣ್ಣೆ ಹಾಗೂ ಅಗ್ಗ ದರದಲ್ಲಿಯ ಬಟ್ಟೆ ಇವುಗಳ ಸಾಗಾಣಿಕೆ ಹಾಗೂ ವಿತರಣೆ ಮಾಡುವ ಉಸ್ತುವಾರಿ ಈ ಕಾರ್ಯಾಲಯದ್ದಾಗಿದೆ. ಇದೂ ಅಲ್ಲದೇ ಸಗಟು ವರ್ತಕರಿಗೆ ಪರವಾನಗಿ ನೀಡುವುದು, ಪರವಾನಗಿ ನವೀಕರಣ, ದಾಸ್ತಾನು ಪರಿಶೀಲನೆ ಕಾಯ್ದೆ ಉಲ್ಲಂಘನೆ ಮಾಡಿದಲ್ಲಿ ಕ್ರಮ ಜರುಗಿಸುವುದು, ನ್ಯಾಯಬೆಲೆ ಅಂಗಡಿಗಳ ಮಂಜೂರಾತಿ ಮತ್ತು ರದ್ದತಿ ಮುಂತಾದ ಕಾರ್ಯ ಜವಾಬ್ದಾರಿಗಳನ್ನು ಈ ಕಾರ್ಯಾಲಯ ಹೊಂದಿದೆ. ೧೯೮೬ನೇ ಅವಶ್ಯಕ ವಸ್ತುಗಳ ಲೈಸನ್ಸಿಂಗ್ ಆದೇಶ, ೧೯೯೨ರ ಸಾರ್ವಜನಿಕ ವಿತರಣಾ ಪದ್ಧತಿ ಆದೇಶ ಮುಂತಾದ ನಿಯಮಗಳನ್ನು ಈ ಕಾರ್ಯಾಲಯ ಅನ್ವಯಗೊಳಿಸುತ್ತಿದೆ. ಈ ಕಛೇರಿಯ ಅಧೀನದಲ್ಲಿ ಒಂದು ಸಹಾಯಕ ನಿರ್ದೇಶಕರ ಕಛೇರಿ, ಪಡಿತರ, ಗುಲಬರ್ಗಾದಲ್ಲಿ ಇದೆ. ಹತ್ತು ತಾಲೂಕುಗಳಲ್ಲಿ ಅಧೀನ ಕಛೇರಿಗಳು ಇವೆ. ಜಿಲ್ಲೆಯಲ್ಲಿ ತಾಲೂಕಿಗೆ ಇಬ್ಬರಂತೆ ೨೦ ಆಹಾರ ನಿರೀಕ್ಷಕರು ಹಾಗೂ ಎರಡು ತಾಲೂಕಿಗೆ ಒಬ್ಬರಂತೆ ಆಹಾರ ಶಿರಸ್ತೇದಾರರು ತಾಲೂಕು ಕಛೇರಿಯಲ್ಲೂ ಕಾರ್ಯ ನಿರ್ವಸಿಸುವರು. ಗುಲಬರ್ಗಾ ಜಿಲ್ಲಾಧಿಕಾರಿಗಳು ಈ ಇಲಾಖೆಯ ತತ್‌ಕ್ಷಣದ ಮೇಲಾಧಿಕಾರಿಯಾಗಿರುತ್ತಾರೆ.

## ಕೃಷಿ ಇಲಾಖೆ

ಕೃಷಿ ಅಭಿವೃದ್ಧಿ ಹಾಗೂ ಜಿಲ್ಲೆಯ ರೈತರಿಗೆ ಸರ್ಕಾರದ ಸವಲತ್ತುಗಳನ್ನು ಒದಗಿಸುವ ಉದ್ದೇಶದಿಂದ ಜಂಟಿ ಕೃಷಿ ನಿರ್ದೇಶಕರು, ಗುಲಬರ್ಗಾ ವಿಭಾಗ, ಗುಲಬರ್ಗಾವು ೧೯೭೪ ರಲ್ಲಿ ಕಾರ್ಯಾರಂಭ ಮಾಡಿದೆ. ಕೃಷಿಗೆ ಸಂಬಂಧಪಟ್ಟಂತೆ

ಜಿಲ್ಲೆಯ ಸಂಪೂರ್ಣ ಆಡಳಿತ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳನ್ನು ನೋಡಿಕೊಳ್ಳುವ ಹೊಣೆಗಾರಿಕೆ ಜಂಟಿ ಕೃಷಿ ನಿರ್ದೇಶಕರದ್ದಾಗಿದೆ. ಕರ್ನಾಟಕ ಬೀಜ ಕಾಯ್ದೆ (ಕರ್ನಾಟಕ ಸೀಡ್ಸ್ ಅಕ್ಟ್) ಗೊಬ್ಬರ ಕಾಯ್ದೆ (ಫರ್ಟಿಲೈಸರ್ ಆಕ್ಟ್) ಇವುಗಳನ್ನು ಕಛೇರಿ ಅನ್ವಯಗೊಳಿಸುತ್ತಿದೆ. ಎಣ್ಣೆಕಾಳು ಅಭಿವೃದ್ಧಿ ಯೋಜನೆ,ದ್ವಿದಳ ಧಾನ್ಯ ಅಭಿವೃದ್ಧಿ ಯೋಜನೆ, ವಿಶೇಷ ಘಟಕ, ಯೋಜನೆ, ಕಬ್ಬು ಅಭಿವೃದ್ಧಿ ಯೋಜನೆ, ಗಿರಜನ ಕಲ್ಯಾಣ ಯೋಜನೆ ನೈಜ ಕೃಷಿ ಪದ್ಧತಿ, ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಯೋಜನೆ, ನಾಗಾರ್ಜುನ ಸಾಗರ ನದಿ ಕಣಿವೆ ಯೋಜನೆ, ದಶಲಕ್ಷ ಭಾವಿ ಯೋಜನೆ, ಉದ್ಯೋಗ ಭರವಸೆ ಯೋಜನೆ ಜವಾಹರ ರೋಜಗಾರ ಯೋಜನೆ, ಒಣ ಭೂಮಿ ಅಭಿವೃದ್ಧಿ ಯೋಜನೆ, ಭೂಸಾರ ಸಂರಕ್ಷಣಾ ಯೋಜನೆ ಮುಂತಾದ ಯೋಜನೆಗಳನ್ನು ಈ ಕಾರ್ಯಾಲಯ ಅನುಷ್ಠಾನ ಗೊಳಿಸುತ್ತದೆ.

ಕೃಷಿ ವಿಸ್ತರಣಾ ಕಾರ್ಯತಂತ್ರವನ್ನು ಜಲಾನಯನ ಆಧಾರಿತ ಖುಷ್ಕಿ ಭೂ ಅಭಿವೃದ್ಧಿಯೊಂದಿಗೆ ಹೆಚ್ಚು ಪರಿಣಾಮಕಾರಿ ಹಾಗೂ ಸಮರ್ಪಕವಾಗಿ ಅನುಷ್ಠಾನಗೊಳಿಸಲು ಕೃಷಿ ಇಲಾಖೆಯಲ್ಲಿನ ಸಸ್ಯ ಸಂಗೋಪನೆ, ಹಾಗೂ ಭೂಸಾರ ರಕ್ಷಣೆ ವಿಭಾಗಗಳನ್ನು ಸರ್ಕಾರ ವಿಲೀನಗೊಳಿಸಿ ೧೯೯೫ರ ಜೂನ್‌ದಿಂದ ಇಲಾಖೆಯನ್ನು ಪುನರ್ ರಚನೆ ಗೊಳಿಸಿದೆ. ಗ್ರಾಮ ಪಂಚಾಯ್ತಿಯನ್ನು ಒಂದು ಘಟಕವಾಗಿ ಪರಿಗಣಿಸಿ ಈ ನೂತನ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ. ಹೀಗೆ ಪುನರ್ ರೂಪಗೊಂಡ ವ್ಯವಸ್ಥೆಯು ಪ್ರತಿ ಜಿಲ್ಲೆಯನ್ನು ಎರಡು ವಿಭಾಗಗಳಾಗಿ (ಕೊಡಗು ಬೆಂಗಳೂರು (ನಗರ) ಹಾಗೂ ಬೀದರ್ ಜಿಲ್ಲೆಗಳನ್ನು ಹೊರತುಪಡಿಸಿ) ವಿಗಂಡಸಿ ಪ್ರತಿ ವಿಭಾಗವು ಒಬ್ಬ ವಿಭಾಗೀಯ ಕೃಷಿ ನಿರ್ದೇಶಕರ ಆಡಳಿತಕ್ಕೆ ಒಳಪಟ್ಟಿದ್ದು ಅವರ ನೆರವಿಗೆ ಇಬ್ಬರು ಸಹಾಯಕ ಕೃಷಿ ನಿರ್ದೇಶಕರು (ಒಬ್ಬರು ವಿಷಯ ತಜ್ಞರು ಹಾಗೂ ಇನ್ನೊಬ್ಬರು ಕೇಂದ್ರಸ್ಥಾನದಲ್ಲಿದ್ದು ಕೃಷಿ ಚಟುವಟಿಕೆಗಳನ್ನು ನೋಡಿಕೊಳ್ಳುವುದು) ಇದ್ದು ವಿಭಾಗೀಯ ಕೃಷಿ ಆಡಳಿತ ಮೇಲ್ವಿಚಾರಣೆ ನೋಡಿಕೊಳ್ಳುವರು. ಜಿಲ್ಲೆಯ ಎಲ್ಲ ಕೃಷಿ ಕಾರ್ಯಕ್ರಮಗಳ ಉಸ್ತುವಾರಿ ಹಾಗೂ ಮೇಲ್ವಿಚಾರಣೆ ಸಲುವಾಗಿ ಪ್ರತಿ ಜಿಲ್ಲೆಯಲ್ಲಿ ಒಬ್ಬ (ಜಿಲ್ಲಾ ಮಟ್ಟದಲ್ಲಿ) ಜಂಟಿ ನಿರ್ದೇಶಕರನ್ನು ನಿಯಮಿಸಲಾಗಿದೆ.

ಗುಲಬರ್ಗಾದಲ್ಲಿ ಉಪ-ನಿರ್ದೇಶಕರ ಕಛೇರಿಯಿದ್ದು ಐದು ತಾಲೂಕುಗಳಾದ ಅಫಜಲಪುರ, ಗುಲಬರ್ಗಾ, ಆಳಂದ ಚಿಂಚೋಳಿ ಹಾಗೂ ಚಿತ್ತಾಪುರಗಳ ಅಧಿಕಾರ ವ್ಯಾಪ್ತಿಯನ್ನು ಈ ಕಛೇರಿಯು ಹೊಂದಿರುವರು. ಇನ್ನೂಳಿದ ತಾಲೂಕುಗಳು ಶಹಾಪುರ ಉಪ-ನಿರ್ದೇಶಕರ ಆಡಳಿತಕ್ಕೆ ಒಳಪಟ್ಟಿವೆ. ತಾಲೂಕು ಮಟ್ಟದ ಅಧೀನ ಕಛೇರಿಗಳು ಸಹಾಯಕ ಕೃಷಿ ನಿರ್ದೇಶಕರ ಆಡಳಿತಕ್ಕೆ ಒಳಪಟ್ಟಿವೆ. ಜಂಟಿ ನಿರ್ದೇಶಕರ ಅಧೀನದಲ್ಲ ಕೆಲಸ ಮಾಡುವ ಇತರ ಕಛೇರಿಗಳಾದ ಕೃಷಿ ಪಾಠ ಶಾಲೆ ಗುಲಬರ್ಗಾ ಮಣ್ಣು ಆರೋಗ್ಯ ಕೇಂದ್ರ ಗುಲಬರ್ಗಾ, ಸಂಚಾರಿ ಮಣ್ಣು ಆರೋಗ್ಯ ಕೇಂದ್ರ ಹಾಗೂ ಬೀಜೋತ್ಪಾದನಾ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಕೃಷಿ ನಿರ್ದೇಶಕರು, ಬೆಂಗಳೂರು ಇವರು ತತಕ್ಷಣದ ಮೇಲಾಧಿಕಾರಿಗಳಾಗಿರುತ್ತಾರೆ.

## ಉದ್ಯೋಗ ಮತ್ತು ತರಬೇತಿ ಇಲಾಖೆ

ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯು ೧೯೬೪ರಲ್ಲಿ ಗುಲಬರ್ಗಾದಲ್ಲಿ ಕಾರ್ಯಾರಂಭ ಮಾಡಿತು. ಇದಕ್ಕೂ ಮೊದಲು ಇದು ಕಾರ್ಮಿಕ ಇಲಾಖೆಯ ವ್ಯಾಪ್ತಿಯಲ್ಲಿ ಇತ್ತು. ೧೯೬೪ರಿಂದ ಉದ್ಯೋಗ ಮತ್ತು ತರಬೇತಿ ಇಲಾಖೆ ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿದೆ. ಉದ್ಯೋಗ ನೆರವು, ವೃತ್ತಿ ಮಾರ್ಗದರ್ಶನ, ಉದ್ಯೋಗ ಮಾಹಿತಿ, ಸ್ವಯಂ ಉದ್ಯೋಗ ಬಯಸಿ ಬರುವ ಅಭ್ಯರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ನೀಡುವುದು ಮುಂತಾದ ಉದ್ದೇಶಗಳನ್ನು ಈ ಕಛೇರಿ ಹೊಂದಿದೆ. ಉದ್ಯೋಗಾಧಿಕಾರಿಗಳು ಮುಖ್ಯಾಧಿಕಾರಿಗಳಾಗಿದ್ದು ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುವುದು. ಉದ್ಯೋಗ ವಿನಿಮಯ ಕೇಂದ್ರಗಳ (ಖಾಲಿ ಹುದ್ದೆಗಳ ಕಡ್ಡಾಯ ಅಧಿಸೂಚನೆ) ಅಧಿನಿಯಮ ೧೯೫೯, ಉದ್ಯೋಗ ವಿನಿಮಯ ಕೇಂದ್ರಗಳ ಅಧಿನಿಮಯ ೧೯೬೦, ರಾಷ್ಟ್ರೀಯ ಉದ್ಯೋಗ ಸೇವಾ ಕೈಪಿಡಿ ಭಾಗ-೧ ಮತ್ತು ಭಾಗ ೨ ಈ ಸೇವಾ ನಿಯಮಗಳನ್ನು ಕಛೇರಿ ಅನ್ವಯಗೊಳಿಸುತ್ತಿದೆ. ಉದ್ಯೋಗ ನೆರುವಿಗಾಗಿ ಬರುವ ಎಲ್ಲ ಪುರುಷ ಹಾಗೂ ಮಹಿಳಾ ಅಭ್ಯರ್ಥಿಗಳ ಹೆಸರುಗಳನ್ನು ಈ ಕಛೇರಿಯಲ್ಲಿ ನೊಂದಾಯಿಸಿ ಕೊಳ್ಳಲಾಗುತ್ತದೆ. ಹಾಗೂ ಪ್ರತಿ ಮೂರು ವರುಷಗಳಿಗೊಮ್ಮೆ ಅಭ್ಯರ್ಥಿಗಳು ತಮ್ಮ ಹೆಸರನ್ನು ನವೀಕರಿಸಬೇಕು. ಜಿಲ್ಲೆಯ ನಿರುದ್ಯೋಗಿಗಳ ಸಂಖ್ಯೆಯನ್ನು ಕಂಡು ಹಿಡಿದು ಸಾರ್ವಜನಿಕ ಹಾಗೂ ಖಾಸಗಿ ನಿಯೋಜಕರುಗಳಿಂದ ಉದ್ಯೋಗ ಬೇಡಿಕೆ ಬಂದಾಗ ನಿಯೋಜಕರು ಸೂಚಿಸಿದ

ವಿದ್ಯಾರ್ಹತೆ ವಯೋಮಿತಿ ಈ ಮಾಹಿತಿಗಳನ್ನು ಅನುಸರಿಸಿ ನೊಂದಣಿ ಜೇಷ್ಠತೆ ಆಧಾರದ ಮೇಲೆ ಅರ್ಹ ಅಭ್ಯರ್ಥಿಗಳ ಪುರಸ್ಕರಣೆ ಮಾಡುವುದು ಹಾಗೂ ತರಬೇತಿಗಳಲ್ಲಿ ಸಹ ಅಭ್ಯರ್ಥಿಗಳ ಪುರಸ್ಕರಣೆ ಮಾಡುವುದು, ವೃತ್ತಿ ಮಾರ್ಗದರ್ಶನ ನೀಡುವುದು ಮುಂತಾದ ಕಾರ್ಯ ಚಟುವಟಿಕೆಗಳನ್ನು ಈ ಕಾರ್ಯಾಲಯ ನಡೆಸಿಕೊಂಡು ಬರುತ್ತಿದೆ. ಸ್ವಯಂ ಉದ್ಯೋಗ ಘಟಕ ಹಾಗೂ ಅಂಗವಿಕಲ ಅಭ್ಯರ್ಥಿಗಳ ನೊಂದಣಿ ಕಾರ್ಯವನ್ನು ಸಹ ಈ ಕಛೇರಿ ಆದ್ಯತೆಯ ಮೇರೆಗೆ ನಿರ್ವಹಿಸುವರು. ನಿರ್ದೇಶಕರು ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯ ಬೆಂಗಳೂರು ಇವರು ತತ್‌ಕ್ಷಣದ ಮೇಲಾಧಿಕಾರಿಗಳಾಗಿರುತ್ತಾರೆ.

**ಕಾಲೇಜು ಶಿಕ್ಷಣ ಇಲಾಖೆ**

ಜಂಟಿ-ನಿರ್ದೇಶಕರು, ಕಾಲೇಜು ಶಿಕ್ಷಣದ ಪ್ರಾದೇಶಿಕ ಕಾರ್ಯಾಲಯವು ೧೯೮೫ರಲ್ಲಿ ಗುಲಬರ್ಗಾದಲ್ಲಿ ಪ್ರಾರಂಭಗೊಂಡಿತು. ಆರಂಭದಲ್ಲಿ ಮುಖ್ಯಸ್ಥರ ಹುದ್ದೆಯ ಹೆಸರು ಉಪ-ನಿರ್ದೇರ್ಶಕರು ಕಾಲೇಜು ಶಿಕ್ಷಣ ಎಂದು ಇದ್ದು ೧೯೯೫ರಲ್ಲಿ ಈಗಿರುವಂತೆ ಜಂಟಿ-ನಿರ್ದೇಶಕರು ಎಂದು ಬದಲಾವಣೆ ಗೊಂಡಿತು. ಗುಲಬರ್ಗಾ ವಿಭಾಗದ ಖಾಸಿಗಿ ಅನುದಾನಿತ ಮತ್ತು ಅನುದಾನ ರಹಿತ ಕಾಲೇಜುಗಳಲ್ಲಿ ಸರ್ಕಾರಿ ಆದೇಶಗಳ ಪಾಲನೆ ನಿರೀಕ್ಷಣೆ, ಸಿಬ್ಬಂದಿವೇತನ ಮತ್ತು ಸಾಮಾನ್ಯ ಶಿಕ್ಷಣ ನಿರ್ವಹಣೆ ಮುಂತಾದ ಕಾರ್ಯ ಜವಾಬ್ದಾರಿಗಳನ್ನು ಈ ಕಾರ್ಯಾಲಯ ನಿರ್ವಹಿಸುವುದು. ಸ್ಥಳೀಯ ಖಾಸಗಿ ಸಂಸ್ಥೆಗಳ ಅಧೀನಕ್ಕೊಳಪಡುವ ಕಾಲೇಜು ಸಿಬ್ಬಂದಿಗಳ ವಿವಿಧ ಸೌಲಭ್ಯಗಳ ನಿಯಮಗಳು ೧೯೬೩ ಸರ್ಕಾರಿ ಆದೇಶಗಳು ಹಾಗೂ ೧೯೮೧ ಮಾರ್ಗದರ್ಶಿ ನಿಯಮಗಳನ್ನು ಈ ಕಛೇರಿ ಅನ್ವಯಗೊಳಿಸುತ್ತದೆ. ಗುಲಬರ್ಗಾ ವಿಶ್ವವಿದ್ಯಾಲಯದ ಸಂಲಗ್ನತೆಗೆ ಒಳಪಡುವ ಎಲ್ಲ ಖಾಸಗಿ ಅನುದಾನಿತ ಹಾಗೂ ಅನುದಾನ ರಹಿತ ಕಾಲೇಜುಗಳ ಆಡಳಿತಾತ್ಮಕ ಮೇಲ್ವಿಚಾರಣೆ ಮತ್ತು ಅನುದಾನಿತ ಕಾಲೇಜು ಸಿಬ್ಬಂದಿಗಳ ವೇತನಾನುದಾನ ಬಿಡುಗಡೆ ಮುಂತಾದ ಇನ್ನಿತರ ಚಟುವಟಿಕೆಗಳನ್ನು ಕಾರ್ಯಾಲಯ ನಿರ್ವಹಿಸುತ್ತಿದೆ. ನಿರ್ದೇಶಕರು ಕಾಲೇಜು ಶಿಕ್ಷಣ ಇಲಾಖೆ ಬೆಂಗಳೂರು ಇವರು ತತ್‌ಕ್ಷಣದ ಮೇಲಾಧಿಕಾರಿಗಳಾಗಿರುತ್ತಾರೆ.

**ಕೃಷಿ ಮಾರಾಟ ಇಲಾಖೆ**

ಕೃಷಿ ಹುಟ್ಟುವಳಿಗಳ ಮಾರಾಟ ನಿಯಂತ್ರಣ ಹಾಗೂ ಮಾರುಕಟ್ಟೆ ಸಮಿತಿಗಳ ಮೇಲ್ವಿಚಾರಣೆ ಉದ್ದೇಶದಿಂದ ಜಿಲ್ಲಾ ಮಾರುಕಟ್ಟೆ ಅಧಿಕಾರಿಗಳ ಕಛೇರಿಯು ಗುಲಬರ್ಗಾದಲ್ಲಿ ೧೯೬೦ರಲ್ಲಿ ಪ್ರಾರಂಭವಾಯಿತು. ಮುಂದೆ ಹುದ್ದೆ ಹೆಸರು ಸಹಾಯಕ ನಿರ್ದೇಶಕರು ಕೃಷಿ ಮಾರಾಟ ಇಲಾಖೆ ಎಂದು ೧೯೮೬ರಲ್ಲಿ ಬದಲಾವಣೆಗೊಂಡಿತು. ಮತ್ತೆ ೧೯೯೪ರಲ್ಲಿ ಹುದ್ದೆಯನ್ನು ಉನ್ನತೀಕರಣಗೊಳಿಸಿ ಈಗಿರುವಂತೆ ಉಪ-ನಿರ್ದೇಶಕರು ಕೃಷಿ ಮಾರಾಟ ಎಂದಾಯಿತು. ಉಪ-ನಿರ್ದೇಶಕರು ಜಿಲ್ಲಾ ವ್ಯಾಪ್ತಿಯ ಆಡಳಿತಾಧಿಕಾರ ಹೊಂದಿರುವುದು ಇವರ ಕಾರ್ಯದಲ್ಲಿ ಸಹಾಯಕರಾಗಿ ಮಾರುಕಟ್ಟೆ ನಿರೀಕ್ಷಕರು ಸೇರಿದಂತೆ ಏಳು ಜನ ಸಿಬ್ಬಂದಿ ಇದೆ. ಗುಲಬರ್ಗಾ,ಸುರಪುರ, ಯಾದಗರಿ, ಶಹಾಪುರ, ಚಿತ್ತಾಪುರ ಹಾಗೂ ಸೇಡಂಗಳಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು (ಎ.ಪಿ.ಎಂ.ಸಿ) ಕಾರ್ಯದರ್ಶಿಗಳ ಮುಖ್ಯಸ್ತಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧೀನ ಕಛೇರಿಗಳಾಗಿವೆ. ಜಿಲ್ಲೆಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಕೃಷಿ ಹುಟ್ಟುವಳಿಗಳ ಮಾರಾಟ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಕೃಷಿ ಮಾರಾಟ ನಿಯಂತ್ರಣ ಶಾಸನ ೧೯೬೬ ಹಾಗೂ ಅಧಿನಿಯಮಗಳನ್ನು ಈ ಕಾರ್ಯಾಲಯ ಅನ್ವಯಗೊಳಿಸುತ್ತದೆ. ಗುಲಬರ್ಗಾ ಜಿಲ್ಲೆಯಲ್ಲಿ ಆರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿವೆ. ಹಾಗೂ ೨೨ ಉಪ ಮಾರುಕಟ್ಟೆಗಳು ಇವೆ. ಮಾರುಕಟ್ಟೆ ಶುಲ್ಕ ವಸೂಲಿ ಗುರಿಯನ್ನು ನಿಗಧಿ ಪಡಿಸುವುದು, ನಿಯಂತ್ರಣ ಕಾರ್ಯವನ್ನು ಪರಿಶೀಲಿಸುವುದು ಹಾಗೂ ಕ್ರಿಯಾ ಯೋಜನೆಯಡಿ ಕೈಗೊಳ್ಳಲಾದ ಅಭಿವೃದ್ಧಿ ಕಾರ್ಯಗಳನ್ನು ಪರಿಶೀಲಿಸುವುದು, ಮಾರುಕಟ್ಟೆ ಸಮಿತಿಗಳ ಅಭಿವೃದ್ಧಿ ಕೆಲಸಗಳಿಗೆ ಮಂಜೂರಿ ನೀಡುವುದು, ಉಗ್ರಾಣಗಳ ಪರಿವೀಕ್ಷಣೆ ಮುಂತಾದ ಕಾರ್ಯಚಟುವಟಿಕೆಗಳನ್ನು ಈ ಕಾರ್ಯಾಲಯ ನಿರ್ವಹಿಸುತ್ತಿದೆ. ಜಂಟಿ-ನಿರ್ದೇಶಕರು ಕೃಷಿ ಮಾರಾಟ ಇಲಾಖೆ ಗುಲಬರ್ಗಾ ಇವರು ಮೇಲಾಧಿಕಾರಿಗಳು ವಿಭಾಗೀಯ ಕಾರ್ಯಾಲಯವಾದ ಜಂಟಿ-ನಿರ್ದೇಶಕರ ಕಛೇರಿಯು ನಾಲ್ಕು ಜಿಲ್ಲೆಗಳಾದ ಗುಲಬರ್ಗಾ, ರಾಯಚೂರು, ಬೀದರ್ ಹಾಗೂ ಬಳ್ಳಾರಿಗಳ ಅಧಿಕಾರ ವ್ಯಾಪ್ತಿಯನ್ನು ಹೊಂದಿದ್ದಾರೆ.

## ಕರ್ನಾಟಕ ಸರ್ಕಾರ ವಿಮಾ ಇಲಾಖೆ

ಜಿಲ್ಲೆಯಲ್ಲಿರುವ ಎಲ್ಲಾ ಸರ್ಕಾರಿ ನೌಕರರನ್ನು ಕಡ್ಡಾಯ ವಿಮಾ ವ್ಯಾಪ್ತಿಗೆ ಒಳಪಡುವಂತೆ ಮಾಡುವ ಉದ್ದೇಶದಿಂದ ಮತ್ತು ವಿಮಾದಾರರಿಗೆ ಉತ್ತಮ ಸೇವೆಯನ್ನು ಒದಗಿಸುವ ಉದ್ದೇಶದಿಂದ ವಿಮಾ ಇಲಾಖೆಯ ಕಛೇರಿಯು ಗುಲಬರ್ಗಾದಲ್ಲಿ ೧೯೭೭ರಲ್ಲಿ ಪ್ರಾರಂಭಗೊಂಡಿತು. ಜಿಲ್ಲಾ ವಿಮಾ ಅಧಿಕಾರಿಗಳು ಕಛೇರಿಯ ಮುಖ್ಯಾಧಿಕಾರಿಯಾಗಿರುವರು. ವಿಮಾ ಪಾಲಿಸಿಗಳ ಮೇಲೆ ಸಾಲ ಮಂಜೂರಾತಿ ಹಕ್ಕು ಪ್ರಕರಣಗಳನ್ನು ಇತ್ಯರ್ಥಗೊಳಿಸುವುದು, ಎಲ್ಲಾ ಸರ್ಕಾರಿ ವಾಹನಗಳ ಹಾಗೂ ಸರ್ಕಾರದ ಹಣಕಾಸಿನ ಆಸ್ತಿತ್ವತೆಯನ್ನು ಹೊಂದಿರುವ ಸಂಸ್ಥೆಗಳ ವಾಹನಗಳನ್ನು ಈ ಇಲಾಖೆಯ ಮೋಟಾರು ವಾಹನ ಶಾಖೆಯ ವ್ಯಾಪ್ತಿಗೆ ತರುವುದು ಮತ್ತು ಇದಕ್ಕೆ ಪೂರಕವಾಗಿ ರಕ್ಷಣೆ ಪತ್ರಗಳನ್ನು ನೀಡವುದು, ಸ್ಥಳೀಯ ಸಂಸ್ಥೆಗಳು, ಸರ್ಕಾರದಿಂದ ಅನೂದಾನ ಪಡೆಯುತ್ತಿರುವ ಶಿಕ್ಷಣ ಸಂಸ್ಥೆಗಳ ಕುಟುಂಬ ಕಲ್ಯಾಣ ನಿಧಿ ಪ್ರಕರಣಗಳ ಇತ್ಯಾರ್ಥ, ಎಂಡೋಮೆಂಟ್ (ದತ್ತಿ) ವಿಮಾ ಪಾಲಿಸಿಗಳನ್ನು ನೀಡುವುದು ವಿಮಾ ತ್ಯಾಗ ಮೌಲ್ಯ ಪ್ರಕರಣಗಳ ಇತ್ಯರ್ಥ ಮಂತಾದ ಕಾರ್ಯಜವಾಬ್ದಾರಿಗಳನ್ನು ಈ ಕಾರ್ಯಾಲಯ ನಿರ್ವಹಿಸುವುದು. ಸರ್ಕಾರಿ ನೌಕರರ ಕಡ್ಡಾಯ ಜೀವ ವಿಮಾ ನಿಯಮ (೧೯೫೮)ಗಳನ್ನು ಈ ಕಛೇರಿ ಅನ್ವಯಗೊಳಿಸುವುದು ಉಪ-ನಿರ್ದೇಶಕರ ವಿಭಾಗೀಯ ಕಛೇರಿ ಗುಲಬರ್ಗಾ ಇವರು ತತ್‌ಕ್ಷಣದ ಮೇಲಾಧಿಕಾರಿಗಳಾಗಿರುತ್ತಾರೆ.

## ಕಾನೂನು ಮಾಪನ ಶಾಸ್ತ್ರ ಇಲಾಖೆ

ಪ್ರಮಾಣ ಬದ್ಧ ತೂಕ ಮತ್ತು ಅಳತೆ ಕಾನೂನು ೧೯೭೬ ಹಾಗೂ ಪೊಟ್ಟಣ ಸಾಮಗ್ರಿಗಳ ನಿಯಮ ೧೯೭೭ರ ನಿಯಮಾವಳಿ ಜಾರಿಗೊಳಿಸಲು ಕಾನೂನು ಮಾಪನ ಶಾಸ್ತ್ರ ಸಹಾಯಕ ನಿಯಂತ್ರಕರ ಕಛೇರಿಯು ಗುಲಬರ್ಗಾದಲ್ಲಿ ೧೯೬೦ರಲ್ಲಿ ಪ್ರಾರಂಭಗೊಂಡಿದೆ. ರಾಜ್ಯ ಪುನರ್ ವಿಂಗಡನೆ ಪೂರ್ವದಲ್ಲಿ ಇದು ಸ್ವತಂತ್ರ ಇಲಾಖೆಯಾಗಿರದೆ ತೂಕ ಮತ್ತು ಅಳತೆ ವಿಭಾಗ ಎಂದು ವಾಣಿಜ್ಯ ಹಾಗೂ ಕೈಗಾರಿಕಾ ಇಲಾಖೆಯಲ್ಲಿ ಸೇರಿಕೊಂಡಿತ್ತು.

೧೯೯೦-೯೧ರಲ್ಲಿ ಇಲಾಖೆಯನ್ನು ಕಾನೂನು ಮಾಪನ ಶಾಸ್ತ್ರ ಎಂದು ಪುನರ್ ನಾಮಕರಣ ಮಾಡಿದ ನಂತರ ಹುದ್ದೆಯ ಹೆಸರನ್ನು ಸಹಾಯಕ ನಿರ್ದೇಶಕರು ಕಾನೂನು ಮಾಪನ ಶಾಸ್ತ್ರ ಎಂದು ಬದಲಾವಣೆ ಮಾಡಲಾಯಿತು. ಕಛೇರಿಯ ಮುಖ್ಯಸ್ಥರು ಗುಲಬರ್ಗಾ ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿದ್ದು ಅವರ ನೆರುವಿಗೆ ಒಬ್ಬರು ಕಾನೂನು ಮಾಪನ ಶಾಸ್ತ್ರ ನಿರೀಕ್ಷಕರು ಗುಲಬರ್ಗಾ ಹಾಗೂ ಇನ್ನೊಬ್ಬ ನಿರೀಕ್ಷಕರು ಆಟೋ ಮತ್ತು ಟ್ಯಾಕ್ಸಿ ಘಟಕ ಗುಲಬರ್ಗಾ ಇದ್ದು ಇತರ ಆರು ಜನ ಸಿಬ್ಬಂದಿ ಇದ್ದಾರೆ. ಕಾನೂನು ಮಾಪನ ಶಾಸ್ತ್ರ ನಿರೀಕ್ಷಕರು ಗುಲಬರ್ಗಾ ಇವರ ಅಧಿಕಾರ ವ್ಯಾಪ್ತಿಯು ಗುಲಬರ್ಗಾ ಆಳಂದ, ಅಫಜಲಪುರ ಹಾಗೂ ಜೇವರ್ಗಿ ತಾಲೂಕುಗಳಾಗಿರುತ್ತದೆ. ಆದರಂತೆ ನಿರೀಕ್ಷಕರು ಯಾದಗಿರಿ ಇವರ ಅಧಿಕಾರ ವ್ಯಾಪ್ತಿಯು ಯಾದಗಿರಿ, ಸುರುಪುರ ಶಾಹಾಪುರ, ಸೇಡಂ, ಚಿತ್ತಾಪುರ ಹಾಗೂ ಚಿಂಚೋಳಿ ತಾಲೂಕುಗಳಾಗಿವೆ. ಉಪ-ನಿಯಂತ್ರಕರು ಕಾನೂನು ಮಾಪನ ಶಾಸ್ತ್ರ, ಗುಲಬರ್ಗಾ ಇವರು ತತ್‌ಕ್ಷಣದ ಮೇಲಾಧಿಕಾರಿಯಾಗಿದ್ದಾರೆ. ಇವರ ವಿಭಾಗೀಯ ಮಟ್ಟದ ಕಛೇರಿ ಗುಲಬರ್ಗಾದಲ್ಲಿದೆ.

## ಕಾರ್ಮಿಕ ಇಲಾಖೆ

ಕಾರ್ಮಿಕರ ಹಿತಕಾಯುವುದು ಹಾಗೂ ಅವರ ಸಮಸ್ಯೆಗಳಿಗೆ ಸೂಕ್ತ ಕಾನೂನಿನ ಮತ್ತು ಇತರೇ ಪರಿಹಾರ ಒದಗಿಸುವ ದೃಷ್ಟಿಯಿಂದ ಕಾರ್ಮಿಕ ಅಧಿಕಾರಿಗಳ ಕಛೇರಿಯ ೧೯೫೦ ರಷ್ಟು ಹಿಂದೆಯ ಗುಲಬರ್ಗಾದಲ್ಲಿ ಪ್ರಾರಂಭಗೊಂಡಿದೆ. ಇದಕ್ಕೂ ಮೊದಲು ಕಾರ್ಮಿಕ ಇಲಾಖೆ ಹಾಗೂ ಉದ್ಯೋಗ ಮತ್ತು ತರಬೇತಿ ಇಲಾಖೆಗಳು ಜಂಟಿಯಾಗಿದ್ದವು ನಂತರದಲ್ಲಿ ಬೇರ್ಪಟ್ಟವು. ಕಾರ್ಮಿಕ ಅಧಿಕಾರಿಗಳು ಕಛೇರಿ ಮುಖ್ಯಸ್ಥರಾಗಿದ್ದು ಅವರು ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುರರು. ಇವರ ಆಧೀನದಲ್ಲಿ ಮೂರು ಜನ ಹಿರಿಯ ಕಾರ್ಮಿಕ ನಿರೀಕ್ಷಕರು ಮತ್ತು ಇತರೇ ಸಿಬ್ಬಂದಿ ಇರುವರು. ಕಾರ್ಮಿಕ ಪರಿಹಾರ ಕಾಯ್ದೆ (೧೯೨೩), ಕೈಗಾರಿಕಾ ವಿವಾದ ಕಾಯ್ದೆ ೧೯೪೭, ಕನಿಷ್ಟವೇತನ ಕಾಯ್ದೆ ೧೯೪೮, ಇವುಗಳನ್ನು ಕಾರ್ಯಾಲಯ ತನ್ನ ಕೆಲಸ ಕಾರ್ಯಗಳಿಗೆ ಅನ್ವಯಗೊಳಿಸುತ್ತಿದೆ. ಕಾರ್ಮಿಕ ನಿರೀಕ್ಷಕರು ಸೇಡಂ, ಸುರಪುರ ಮತ್ತು ಚಿತ್ತಾಪುರಗಳಲ್ಲಿ ಕಾರ್ಯನಿರ್ವಹಿಸುವುದು. ಸಹಾಯಕ ಕಾರ್ಮಿಕ ಆಯುಕ್ತರು ಗುಲಬರ್ಗಾ ವಿಭಾಗ ಗುಲಬರ್ಗಾ ಇವರು ತತ್‌ಕ್ಷಣದ ಮೇಲಾಧಿಕಾರಿಗಳಾಗಿರುತ್ತಾರೆ.

## ಗಣಿ ಮತ್ತು ಭೂ ವಿಜ್ಞಾನ ಇಲಾಖೆ

ಹಿರಿಯ ಭೂ ವಿಜ್ಞಾನಿಯವರ ಕಛೇರಿಯು ಗುಲಬರ್ಗಾದಲ್ಲಿ ೧೯೫೮ರಲ್ಲಿ ಪ್ರಾರಂಭಗೊಂಡಿತು. ಆಗ ಭೂ ವಿಜ್ಞಾನಿಗಳು ಕಾರ್ಯಾಲಯದ ಮುಖ್ಯಸ್ಥರಿದ್ದು ಮುಂದೆ ೧೯೭೩ರಲ್ಲಿ ಈಗಿರುವಂತೆ ಹಿರಿಯ ಭೂ ವಿಜ್ಞಾನಿಗಳ ಕಾರ್ಯಾಲಯ ಎಂದು ಬದಲಾವಣೆಗೊಂಡಿತು. ಕಛೇರಿಯ ಈಗಿನ ಅಧಿಕಾರ ವ್ಯಾಪ್ತಿಯು ಗುಲಬರ್ಗಾ ಹಾಗೂ ಬೀದರ್ ಜಿಲ್ಲೆಗಳನ್ನೊಳಗೊಂಡಿದೆ. ಆದರೆ ೧೯೯೦ರ ಪೂರ್ವದಲ್ಲಿ ವಿಜಾಪುರ ಜಿಲ್ಲೆಯು ಈ ಕಛೇರಿಯ ಅಧಿಾಕರ ವ್ಯಾಪ್ತಿಗೆ ಇದು ಒಳಪಟ್ಟಿತ್ತು. ಹಿರಿಯ ಭೂ ರಿಜ್ಞಾನಿಗಳಿಗೆ ಸಹಕರಿಸಲು ಒಬ್ಬರು ಭೂ ಭೌತ ವಿಜ್ಞಾನಿ, ಒಬ್ಬರು ಭೂಮಿಯನ್ನು ಕೊರೆಯುವ ಅಭಿಯಂತರರು, ಒಬ್ಬರು ಸಹಾಯಕ ಭೂ ವಿಜ್ಞಾನಿಗಳು ಹೀಗೆ ಒಟ್ಟು ೪೭ಜನ ಸಿಬ್ಬಂದಿ ಇದೆ.

ಗುಲಬರ್ಗಾ ಹಾಗೂ ಬೀದರ್ ಜಿಲ್ಲೆಗಳ ಖನಿಜಾಡಳಿತ, ಖನಿಜ ರಕ್ಷಣೆ, ವೈಜ್ಞಾನಿಕ ಪದ್ಧತಿಯಂತೆ ಖನಿಜ ಉಪಯೋಗ, ಗುತ್ತಿಗೆಗಳ ಮಂಜೂರಿ ಹಾಗೂ ಅವುಗಳ ಮೇಲಿನ ರಾಜಧನ ವಸೂಲಿ, ಗುತ್ತಿಗೆಯನ್ನು ಪಡೆಯದ ಅನದೀಕೃತ ಕೆಲಸ ಗಣಿಗಾರಿಕೆ ವಿರುದ್ಧ ಕ್ರಮ ಜರುಗಿಸುವುದು ಹಾಗೂ ರವಾನಿಸಿದ ಖನಿಜದ ಲೆಕ್ಕಪತ್ರ ತಪಾಸಣೆ ಮಾಡುವುದು, ರೈತರಿಗೆ ಭೂ ಭೌತ ಪದ್ಧತಿಯಿಂದ ಕೊಳವೆ ಬಾವಿಗಳ ಸ್ಥಳ ಆಯ್ಕೆ ಹಾಗೂ ಕೊಳವೆ ಬಾವಿ ಕೊರೆದ ನಂತರ ಇಳುವರಿ ಪರೀಕ್ಷೆ ಮುಂತಾದ ಕಾರ್ಯ ಚಟುವಟಿಕೆಗಳನ್ನು ಈ ಕಾರ್ಯಾಲಯ ನಡೆಸಿಕೊಂಡು ಬರುತ್ತಿದೆ. ಗಣಿ ಕಾಯ್ದೆ ೧೯೫೨ ಎಂ. ಎಂ. (ಆರ್ ಮತ್ತು ಡಿ) ಕಾಯ್ದೆ ೧೯೫೭, ಎಂ. ಸಿ.ಆರ್. ೧೯೬೦ಹಾಗೂ ಕೆ. ಎಂ. ಎಂ. ಸಿ. ಆರ್. ೧೯೯೪ ಗಳನ್ನು ಈ ಕಾರ್ಯಾಲಯವು ಅನ್ವಯಗೊಳಿಸುತ್ತಿದೆ. ನಿರ್ದೇಶಕರು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಬೆಂಗಳೂರು ಇವರು ತತ್‌ಕ್ಷಣದ ಮೇಲಾಧಿಕಾರಿಗಳಾಗಿರುತ್ತಾರೆ.

## ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಛೇರಿಯು ಗುಲಬರ್ಗಾದಲ್ಲಿ ೧೯೮೦ರಲ್ಲಿ ಕಾರ್ಯಾರಂಭ ಮಾಡಿತು. ಗುಲಬರ್ಗಾ ಜಿಲ್ಲೆಯ ಎಲ್ಲ ಸರ್ಕಾರಿ ಮತ್ತು ಸರ್ಕಾರೇತರ ಕಛೇರಿಗಳಲ್ಲಿಯೂ ಕನ್ನಡ ಭಾಷೆಯ ಬಳಕೆ ಹಾಗೂ ಸಂಸ್ಕೃತಿ ಪ್ರಚಾರ ಇವುಗಳ ಮೇಲ್ವಿಚಾರಣೆ, ಕನ್ನಡ ಕಲಿಕೆಯ ಕಾರ್ಯಕ್ರಮ ಹಮ್ಮಿಕ್ಕೊಳ್ಳುವುದು ಈ ಕಛೇರಿಯ ಮುಖ್ಯ ಧೇಯೋದ್ದೇಶಗಳಾಗಿವೆ. ಕನ್ನಡ ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಸರಕಾರಿ ನೌಕರರಿಗೆ, ಅಧಿಕಾರಿಗಳಿಗೆ ತರಬೇತಿ, ನ್ಯಾಯಾಲಯಗಳಲ್ಲಿ ಕನ್ನಡ ಬಳಕೆ ತರಬೇತಿ, ನಿರುದ್ಯೋಗಿ ಕನ್ನಡ ಬೆರಳಚ್ಚುಗಾರರಿಗೆ ಧನ ಸಹಾಯ, ಕನ್ನಡೇತರರಿಗೆ ಕನ್ನಡ ತರಗತಿಗಳನ್ನು ನಡೆಸುವುದು, ಜಿಲ್ಲೆಯ ಕಲಾವಿದರನ್ನು ಗುರುತಿಸುವುದು, ಜಿಲ್ಲಾ ಮಟ್ಟದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳನ್ನು ಮತ್ತು ವಿಚಾಧ ಸಂಕೀರ್ಣಗಳನ್ನು ಏರ್ಪಡಿಸುವುದು ಹಾಗೂ ವಿಶೇಷ ಘಟಕ ಯೋಜನೆಯಡಿ ಕಲಾವಿದರನ್ನು ಪ್ರೋತ್ಸಾಹಿಸುವುದು, ತಾಲೂಕಿಗೆ ಒಂದರಂತೆ ಬಯಲು ರಂಗಮಂದಿರಗಳನ್ನು ನಿರ್ಮಿಸಲು ಧನಸಹಾಯ ಮುಂತಾದ ಕಾರ್ಯ ಚಟುವಟಿಕೆಗಳನ್ನು ಕಾರ್ಯಾಲಯ ನಡೆಸುತ್ತಿವೆ. ಕಲಾವಿದರ, ಸಾಹಿತಿಗಳ, ವೈದ್ಯಕೀಯ ವೆಚ್ಚಗಳ ಮರುಪಾವತಿ, ಪರಿಶಿಷ್ಟ ಜಾತಿ, ಪಂಗಡದ ಕಲಾವಿದರಿಗೆ ತಮ್ಮ ಕಲೆಗಳನ್ನು ಪ್ರದರ್ಶಿಸಲು ಧನಸಹಾಯ ಮಾಡುವುದು, ಸ್ಥಳೀಯ ಕಲಾವಿದರಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲು ಅವಕಾಶ ಮಾಡಿ ಕೊಟ್ಟು ಸಂಭಾವನೆ ನೀಡುವುದು, ಜನಪದ ಕಲಾವಿದರಿಗೆ ಗೌರವಧನ ಹಾಗೂ ಮಾಶಾಸನ ದೊರಕಿಸಿ ಕೊಡುವುದು ಮುಂತಾದ ಇತರ ಚಟುವಟಿಕೆಗಳನ್ನು ಸಹ ಈ ಕಾರ್ಯಾಲಯ ಕಾರ್ಯಗತಗೊಳಿಸುತ್ತಿದೆ. ಸಹಾಯಕ ನಿರ್ದೇಶಕರು ಕಛೇರಿ ಮುಖ್ಯಸ್ಥರಾಗಿದ್ದು ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುವರು. ಉಪ-ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವಿಭಾಗೀಯ ಕಛೇರಿ ಗುಲಬರ್ಗಾ ಇವರು ತತ್‌ಕ್ಷಣದ ಮೇಲಾಧಿಕಾರಿಗಳು.

ವಿಭಾಗೀಯ ಕಛೇರಿಯು ೧೯೭೬ರಲ್ಲಿ ಗುಲಬರ್ಗಾದಲ್ಲಿ ಪ್ರಾರಂಭಗೊಂಡಿತು. ಇದಕ್ಕೂ ಪೂರ್ವದಲ್ಲಿ ಈ ಇಲಾಖೆ ಭಾಷೆಗಳು ಮತ್ತು ಕನ್ನಡದ ಅಭಿವೃದ್ಧಿ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿದ್ದು, ಸಹಾಯಕ ನಿರ್ದೇಶಕರು ಮುಖ್ಯಸ್ಥರಿದ್ದರು. ಪ್ರಸ್ತುತ ಉಪ-ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಾಗಿ ಪರಿವರ್ತನೆಗೊಂಡು ನಾಲ್ಕು ಜಿಲ್ಲೆಗಳ (ಬೀದರ್, ಗುಲಬರ್ಗಾ, ಬಳ್ಳಾರಿ ರಾಯಚೂರು) ಅಧಿಕಾರ ವ್ಯಾಪ್ತಿಯನ್ನು ಹೊಂದಿರುವುದು.

## ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ

ಜಿಲ್ಲೆಯಾದ್ಯಂತ ಲಭ್ಯವಿರುವ ಕಚ್ಚಾ ಸಾಮಗ್ರಿಗಳ ಗುರುತಿಸುವಿಕೆ, ಸಣ್ಣ ಕೈಗಾರಿಕೆಗಳ ಸ್ಥಾಪನೆ, ಉದ್ಯಮ-ಶೀಲರಿಗೆ ಮಾರ್ಗದರ್ಶನ ಹಾಗೂ ಕೈಗಾರಿಕೆಗಳ ಅಭಿವೃದ್ಧಿ ಮುಂತಾದ ಉದ್ದೇಶಗಳಿಂದ ಪ್ರಧಾನ ವ್ಯವಸ್ಥಾಪಕರು ಜಿಲ್ಲಾ ಕೈಗಾರಿಕಾ ಕೇಂದ್ರವು ಗುಲಬರ್ಗಾದಲ್ಲಿ ೧೯೮೦ ರಿಂದ ಅಸ್ತಿತ್ವಕ್ಕೆ ಬಂದಿದೆ. ಇದಕ್ಕೂ ಮೊದಲು ಇದು ಸಹಾಯಕ ನಿರ್ದೇಶಕರ ಆಧೀನದಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಮುಂದೆ ೧೯೭೭ರಲ್ಲಿ ಉಪ-ನಿರ್ದೇಶಕರು ಪದ ನಿಮಿತ್ತ ಯೋಜನಾ ಅಧಿಕಾರಿಗಳು ಗ್ರಾಮೀಣ ಕೈಗಾರಿಕೆ ಯೋಜನೆ ಎಂದು ಬದಲಾಯಿತು. ೧೯೮೦ರಿಂದ ಈಗಿರುವಂತೆ ಪ್ರಧಾನ ವ್ಯವಸ್ಥಾಪಕರು ಕೈಗಾರಿಕಾ ಕೇಂದ್ರ ಎಂದು ಬದಲಾವಣೆಗೊಂಡಿತು. ಪ್ರಧಾನ ವ್ಯವಸ್ಥಾಪಕರು ಜಿಲ್ಲಾವ್ಯಾಪ್ತಿ ಆಡಳಿತಾಧಿಕಾರವನ್ನು ಹೊಂದಿದ್ದು ಜಿಲ್ಲೆಯ ಕೈಗಾರಿಕೆ ಮತ್ತು ವಾಣಿಜ್ಯದ ಸರ್ವಾಂಗೀಣ ಅಭಿವೃದ್ಧಿಯ ಜವಾಬ್ದಾರಿ ಹೊಂದಿರುವರು. ಕೈಗಾರಿಕೆಗೆ ಉಪಯುಕ್ತವಾಗುವಂಥಹ ಮಾನವ ಶಕ್ತಿ ಹಾಗೂ ಮಾರುಕಟ್ಟೆ ಸಮೀಕ್ಷೆ ನಡೆಸುವುದು, ತಾಂತ್ರಿಕ ಹಾಗೂ ಆರ್ಥಿಕ ಯೋಜನಾ ವರದಿಗಳನ್ನು ತಯಾರಿಸುವುದು, ಕೈಗಾರಿಕೋದ್ಯಮಿಗಳಿಗೆ ನೆರವು ನೀಡುವುದು.ಅತೀಸಣ್ಣ ಕೈಗಾರಿಕೆಗಳಿಗೆ ಸೂಕ್ತ ತರಬೇತಿ, ಕಚ್ಚಾ ಮಾಲಿಗಾಗಿ ಹಣಕಾಸಿನ ನೆರುವು, ಮಾರುಕಟ್ಟೆ ಸೌಲಭ್ಯ ಒದಗಿಸುವುದು ಮುಂತಾದ ಕಾರ್ಯ ಚಟುವಟಿಕೆಗಳ ಜೊತೆಗೆ ಹೊಸ ಕೈಗಾರಿಕೆಗಳನ್ನು ಗುರುತಿಸುವುದು, ಅಸ್ತಿತ್ವದಲ್ಲಿಯ ಕೈಗಾರಿಕೆಗಳ ಸಮಸ್ಯೆಗಳ ಪರಿಹಾರ, ರೋಗಗ್ರಸ್ಥ ಕೈಗಾರಿಕೆಗಳ ಗುರುತಿಸುವಿಕೆ ಹಾಗೂ ಅವುಗಳ ಪುನಃಶ್ಚೇತನ, ಕೈಗಾರಿಕೆಗಳ ಗಣತಿ, ನೊಂದಣಿ, ಸಹಾಯಧನ ವಿತರಣೆ, ಪರಿಶಿಷ್ಟ ಪಂಗಡಗಳ ಫಲಾನುಭವಿಗಳನ್ನು ಗುರುತಿಸುವುದು, ಕೈಗಾರಿಕೆ ಉದ್ದೇಶಕ್ಕಾಗಿ ಭೂಮಿ ಹಂಚುವಿಕೆ ಪ್ರಧಾನ ಮಂತ್ರಿಗಳ ರೋಜಗಾರ ಯೋಜನೆ, ವಿಶೇಷ ಘಟಕ ಯೋಜನೆ, ವಿಶ್ವಯೋಜನೆ ಮುಂತಾದವುಗಳ ಅನುಷ್ಠಾನ ಇವು ಕಾರ್ಯಾಲಯದ ಇತರೆ ಅಭಿವೃದ್ಧಿ ಚಟುವಟಿಕೆಗಳಾಗಿವೆ. ಕರ್ನಾಟಕ ರಾಜ್ಯ ಕೈಗಾರಿಕಾ ನೆರವು ಕಾಯ್ದೆ (ಪ್ಯಾಕೇಟ್ ಆಫ್ ಇನ್‌ಸೆಂಟಿವ್ಸ್ ಅಂಡ್ ಕನ್‌ಸೆಶನ್ ಟು ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್ ೧೯೯೩) ಕರ್ನಾಟಕ ಸಾರ್ವಜನಿಕ ಧನ ವಸೂಲಾತಿ ಅಧಿನಿಯಮ ಮತ್ತು ನಿಯಮ ೧೯೫೫ ಮುಂತಾದ ನಿಯಮಗಳನ್ನು ಈ ಕಾರ್ಯಾಲಯವು ತನ್ನ ಕಾರ್ಯಗಳಿಗೆ ಅನ್ವಯಗೊಳಿಸುತ್ತಿದೆ. ಆಯುಕ್ತರು ಕೈಗಾರಿಕಾ ಅಭಿವೃದ್ಧಿ ಹಾಗೂ ನಿರ್ದೇಶಕರು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರು ಮೇಲಾಧಿಕಾರಿಗಳಾಗಿರುತ್ತಾರೆ.

## ಗೃಹರಕ್ಷಕ ದಳ

ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ಪೋಲಿಸರಿಗೆ ನೆರವಾಗುವುದು ಮತ್ತು ವಿಪತ್ತಿನ ಸಮಯದಲ್ಲಿ ನಾಗರಿಕರ ರಕ್ಷಣೆ ಉದ್ದೇಶದಿಂದ ಗೃಹ ರಕ್ಷಕದಳದ (ಕಮಾಂಡೆಟ್) ಕಛೇರಿಯು ೧೯೬೩ರಲ್ಲಿ ಗುಲಬರ್ಗಾದಲ್ಲಿ ಪ್ರಾರಂಭಗೊಂಡಿತು. ಜಿಲ್ಲಾ ಮಟ್ಟದ ಆಡಳಿತಾತ್ಮಕ ಅಧಿಕಾರವನ್ನು ಕಮಾಂಡೆಂಟರು ಹೊಂದಿರುವರು. ಹೊಂಗಾರ್ಡ್ಸ್ ಆ್ಯಕ್ಟ್ ಆ್ಯಂಡ ರೂಲ್ಸ ೧೯೬೩, ಹೊಂಗಾರ್ಡ್ಸ್ ಮ್ಯಾನುಅಲ್ ಹಾಗೂ ಇತರಸೇವಾ ನಿಯಮಗಳನ್ನು ಈ ಕಾರ್ಯಾಲಯ ಅನ್ವಯಗೊಳಿಸುತ್ತಿದೆ. ಘಟಕಾಧಿಕಾರಿಗಳು ತಾಲೂಕು ಮಟ್ಟದ ಅಧಿಕಾರಿಗಳಾಗಿದ್ದು ಜಿಲ್ಲಾ ಕಛೇರಿ ಆದೇಶಗಳನ್ನು ಕಾರ್ಯರೂಪಕ್ಕೆ ತರುವುದು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಕಛೇರಿ ಆದೇಶಗಳನ್ನು ಕಾರ್ಯರೂಪಕ್ಕೆ ತರುವುದು, ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾದಂಡಾಧಿಕಾರಿಗಳಿಂದ ಗೃಹ ರಕ್ಷಕರನ್ನು ವಿವಿಧ ಬಂದೋಬಸ್ತ ಕಾರ್ಯಗಳಿಗೆ ನಿಯೋಜಿಸಲು ಕೋರಿಕೆ ಬಂದಾಗ ಕೇಂದ್ರ ಕಾರ್ಯಾಲಯದ ಸ್ಥಳೀಯವಾಗಿ ಬೋಧಕರಿಂದ ತರಬೇತಿ, ನೀಡುವುದು, ಪ್ರಥಮ ಚಿಕಿತ್ಸೆ, ಬೆಂಕಿ ಅನಾಹುತಗಳಿಂದ ರಕ್ಷಣೆ, ಆಯುಧ ಮತ್ತು ನಿರಾಯುಧ ತರಬೇತಿ ಪ್ರವಾಹಗಳಿಂದ ರಕ್ಷಣೆ ಕಟ್ಟಡಗಳ ರಕ್ಷಣೆ, ಕಾನೂನು ವ್ಯವಸ್ಥೆ, ಲಾಠಿಚಾರ್ಜ್ ಹಾಗೂ ತರಬೇತಿ ಹೊಂದಲು ಬೆಂಗಳೂರಿಗೆ ಕಳಿಸುವುದು ಮುಂತಾದ ಕಾರ್ಯ ಚಟುವಟಿಕೆಗಳನ್ನು ಕಾರ್ಯಾಲಯ ನಿರ್ವಹಿಸುವುದು.

## ಗ್ರಾಹಕರ ವೇದಿಕೆ

ಅನೇಕ ಮೂಲಗಳಿಂದ, ಹಲವಾರು ಶೋಷಣೆಗೆ ಒಳಗಾಗುತ್ತಿರುವ ಗ್ರಾಹಕರ ಹಿತರಕ್ಷಣಾ ವೇದಿಕೆಯು (ಡಿಸ್ಟ್ರಿಕ್ಟ್ ಫೋರಂ) ೧೯೯೦ರಲ್ಲಿ ಗುಲಬರ್ಗಾದಲ್ಲಿ ಪ್ರಾರಂಭಗೊಂಡಿತು. ಈ ವೇದಿಕೆಯು ಗುಲಬರ್ಗಾ ಜಿಲ್ಲಾ ವ್ಯಾಪ್ತಿ ಹೊಂದಿದ್ದು

ಅಧ್ಯಕ್ಷರು ವೇದಿಕೆಯ ಮುಖ್ಯಾಧಿಕಾರಿ ಆಗಿದ್ದು ಗ್ರಾಹಕರ ತಕರಾರುಗಳನ್ನು ವಿಚಾರಣೆ ಮಾಡುವರು. ಗ್ರಾಹಕರ ಹಿತರಕ್ಷಣೆ ಕಾಯ್ದೆ ೧೯೮೬ ಹಾಗೂ ಕರ್ನಾಟಕ ಗ್ರಾಹಕರ ಹಿತರಕ್ಷಣ ನಿಯಮಗಳು ೧೯೮೮ಗಳನ್ನು ಕಾರ್ಯಾಲಯ ಅನ್ವಯಗೊಳಿಸುತ್ತಿದೆ. ಗ್ರಾಹಕರ ತಕರಾರುಗಳನ್ನು ವೇದಿಕೆ ವಿಚಾರಣೆ ಮಾಡಿ ಗ್ರಾಹಕರಿಗೆ ಪರಿಹಾರ ನೀಡಲು ಆದೇಶಿಸುತ್ತದೆ ಈ ಕಾರ್ಯಾಲಯ ೧. ನ್ಯಾಯಾಲಯ ವಿಭಾಗ, ೨. ಆಡಳಿತ ವಿಭಾಗ ಎಂಬ ಎರಡು ವಿಭಾಗ ಹೊಂದಿದ್ದು ನ್ಯಾಯಾಲಯ ವಿಭಾಗವು ಜಿಲ್ಲಾ ನ್ಯಾಯಾಧೀಶರ ದರ್ಜೆಯ ಒಬ್ಬರು ಅಧ್ಯಕ್ಷರು ಹಾಗೂ ಸರ್ಕಾರದಿಂದ ನೇಮಕಗೊಂಡ ಒಬ್ಬ ಪುರುಷ ಹಾಗೂ ಒಬ್ಬ ಮಹಿಳಾ ಸದಸ್ಯರನ್ನು ಒಳಗೊಂಡಿರುವುದು. ಆಡಳಿತ ವಿಭಾಗವು ಆಡಳಿತಾಧಿಕಾರಿಗಳು ಹಾಗೂ ಇತರ ಸಿಬ್ಬಂದಿ ಹೊಂದಿದ್ದು ನಿರ್ದೇಶಕರು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ, ಬೆಂಗಳೂರು ಹಾಗೂ ಅಧ್ಯಕ್ಷರು ಕರ್ನಾಟಕ ರಾಜ್ಯ ಗ್ರಾಹಕರ ಹಿತರಕ್ಷಣಾ ವೇದಿಕೆ ಬೆಂಗಳೂರು, ಇವರು ತತ್‌ಕ್ಷಣದ ಮೇಲಾಧಿಕಾರಿಗಳಾಗಿರುತ್ತಾರೆ.

### ಜನಾರೋಗ್ಯ ಮತ್ತು ಇಂಜಿನಿಯರಿಂಗ್ (ಪಿ.ಎಚ್.ಇ)

ಗುಲಬರ್ಗಾ ವಿಭಾಗದ ಗ್ರಾಮೀಣ ಜನಸ್ತೋಮಕ್ಕೆ ಸಾಕಷ್ಟು ಪ್ರಮಾಣದಲ್ಲಿ ಶುದ್ಧವಾದ ಸುರಕ್ಷಿತ ಕುಡಿಯುವ ನೀರನ್ನು ಸರಬರಾಜು ಮಾಡುವ ಉದ್ದೇಶದಿಂದ ಅಧೀಕ್ಷಕ ಅಭಿಯಂತರರು ಜನಾರೋಗ್ಯ ಶಿಲ್ಪ ವೃತ್ತ ಕಾರ್ಯಾಲಯವು ೧೯೮೪ರಲ್ಲಿ ಗುಲಬರ್ಗಾದಲ್ಲಿ ಕಾರ್ಯಾರಂಭ ಮಾಡಿದೆ. ಇದೊಂದು ಸ್ವತಂತ್ರ ಇಲಾಖೆಯಾಗಿದ್ದು ವಿಭಾಗ ಮಟ್ಟದ ಆಡಳಿತಾಧಿಕಾರ ವ್ಯಾಪ್ತಿ ಹೊಂದಿದೆ. ಅಧೀಕ್ಷಕ ಅಭಿಯಂತರರು ಕಾರ್ಯಾಲಯದ ಮುಖ್ಯಾಧಿಕಾರಿಗಳಾಗಿರುವರು. ದಿನಾಂಕ ೧-೪-೮೭ರಿಂದ ಎಲ್ಲಾ (೭) ಪಿ. ಎಚ್. ಇ (ಸಿವಿಲ್) ವಿಭಾಗಗಳು ಜಿಲ್ಲಾ ಪಂಚಾಯತಿ ಇಂಜಿನೀಯರಿಂಗ್ ವಿಭಾಗಗಳಿಗೆ ಪರಿವರ್ತನೆ ಗೊಂಡ ಮೇಲೆ ಅವು ಜಿಲ್ಲಾ ಪಂಚಾಯಿತಿಗೆ ಹಸ್ತಾಂತರಗೊಂಡು ಕೇವಲ ತಾಂತ್ರಿಕ ನಿರ್ವಹಣೆಯ ಜವಾಬ್ದಾರಿಯು ಈ ಕಛೇರಿಯ ಅಧಿಕಾರ ವ್ಯಾಪ್ತಿಯಲ್ಲಿದೆ. ಗುಲಬರ್ಗಾ ವಿಭಾಗದ ಜಿಲ್ಲೆಗಳಲ್ಲಿ ಬರುವ ಎಲ್ಲಾ ಪಿ. ಎಚ್.ಇ. ಗಳು, ಯಾಂತ್ರಿಕ ವಿಭಾಗ ಗುಲಬರ್ಗಾ ಹಾಗೂ ಕಾರ್ಯಾಗಾರ ಉಪ ವಿಭಾಗ ಗುಲಬರ್ಗಾಕ್ಕೆ ಈ ಕಛೇರಿಯ ಅಧಿಕಾರ ವ್ಯಾಪ್ತಿ ಸೀಮಿತಗೊಂಡಿದೆ.

ಎಲ್ಲ ಗ್ರಾಮಗಳಿಗೆ ಕುಡಿಯುವ ನೀರು ಪೂರೈಸುವ ಬಗೆಗಿನ ತಾಂತ್ರಿಕ ಮೇಲ್ವಿಚಾರಣೆ, ಕೊಳವೆ ಬಾವಿ ನೀರು ಲಭ್ಯತೆಯ ಬಗ್ಗೆ ಶೋಧನೆ, ಇಲಾಖಾ ರಿಗ್ ಯಂತ್ರಗಳಿಂದ ಕೊಳವೆ ಬಾವಿಗಳನ್ನು ಕೊರೆಯುವ ಕಾರ್ಯವನ್ನು ನೋಡಿಕೊಳ್ಳುವುದು, ಜಿಲ್ಲಾ ಪಂಚಾಯತ್ ಇಂಜಿನೀಯರಿಂಗ್ ವಿಭಾಗಗಳಿಂದ ಕೆಲವು ಹಾಗೂ ರಾಜ್ಯ ಘಟಕಗಳಿಂದ ವಿವಿಧ ಕಾರ್ಯಕ್ರಮ ಕೈಗೆತ್ತಿಕೊಳ್ಳುವುದು ಹಾಗೂ ಜಾರಿಗೊಳಿಸುವುದು, ನೀರು ಸರಬರಾಜು ಯೋಜನೆಗಳ ಪ್ರಗತಿ-ಪರಿಶೀಲನೆ, ಅಂದಾಜು ಪಟ್ಟಿ, ತಾಂತ್ರಿಕ ಮಂಜೂರಿ, ಮತ್ತು ಮೇಲ್ವಿಚಾರಣೆ ಜವಾಬ್ದಾರಿಗಳನ್ನು ಈ ಕಾರ್ಯಾಲಯ ನಿರ್ವಹಿಸುತ್ತಿದೆ. (ವಿವರಣೆಗೆ ಅಧ್ಯಾಯ ೧೨ ನೋಡುವುದು)

### ಜಿಲ್ಲಾ ತರಬೇತಿ ಸಂಸ್ಥೆ

ಜಿಲ್ಲಾ ತರಬೇತಿ ಸಂಸ್ಥೆಯು ೧೯೭೪ರಲ್ಲಿ ಗುಲಬರ್ಗಾದಲ್ಲಿ ಪ್ರಾರಂಭಗೊಂಡಿತು. ಇದು ಬೀದರ್ ಮತ್ತು ಗುಲಬರ್ಗಾ ಜಿಲ್ಲಾ ವ್ಯಾಪ್ತಿಯನ್ನು ಹೊಂದಿದ್ದು ಪ್ರಾಚಾರ್ಯರು ಸಂಸ್ಥೆಯ ಮುಖ್ಯಸ್ಥರು. ರಾಜ್ಯ ಸರ್ಕಾರದ ಎಲ್ಲ ಇಲಾಖೆಗಳ ನೌಕರರಿಗೆ ತರಬೇತಿ ನೀಡುವುದು, ಚುನಾಯಿತ ಪಂಚಾಯತ್ ಸಂಸ್ಥೆಗಳ ಸದಸ್ಯರಿಗೆ ತರಬೇತಿ ನೀಡುವುದು, ಕಾಲಕಾಲಕ್ಕೆ ಹಮ್ಮಿಕ್ಕೊಳ್ಳಲಾದ ವಿವಿಧ ಹೊಸ ಯೋಜನೆಗಳ ಬಗ್ಗೆ ನೌಕರರಿಗೆ ತರಬೇತಿ ಶಿಬಿರಗಳನ್ನು ಏರ್ಪಡಿಸುವುದು ಈ ಸಂಸ್ಥೆಯ ಕಾರ್ಯ ಚಟುವಟಿಕೆಗಳಾಗಿವೆ. ವಾರ್ಷಿಕ ತರಬೇತಿ ಕಾರ್ಯಕ್ರಮದಡಿಯಲ್ಲಿ ತರಬೇತಿ ಶಿಬಿರಗಳನ್ನು ಏರ್ಪಡಿಸಲಾಗುವುದು. ಮಹಾ ನಿರ್ದೇಶಕರು ತರಬೇತಿ, ಆಡಳಿತ ತರಬೇತಿ ಸಂಸ್ಥೆ, ಮೈಸೂರು ಇವರು ತತ್‌ಕ್ಷಣದ ಮೇಲಾಧಿಕಾರಿಗಳಾಗಿರುತ್ತಾರೆ.

### ಜಿಲ್ಲಾ ಖಜಾನೆ

ನಿಜಾಮ ಸಂಸ್ಥಾನದಲ್ಲಿ ರಾಜ್ಯ ಪುನರ್ ಘಟನೆಗೂ ಮೊದಲು, ಜಿಲ್ಲಾ ಖಜಾನಾಧಿಕಾರಿಗಳ ಕಛೇರಿಯು ಕಂದಾಯ ಇಲಾಖೆಯ ಆಧೀನದಲ್ಲಿ ಗುಲಬರ್ಗಾದಲ್ಲಿ ಪ್ರಾರಂಭಿಸಲಾಯಿತು. ಇದನ್ನು 'ಜಿಲ್ಲಾಧಿಕಾರಿಗಳ ಟ್ರಜರಿ ಬ್ಯಾಂಕ್'

ಎಂದು ಕರೆಯಲಾಗುತ್ತಿತ್ತು. ೧೯೬೪ರಲ್ಲಿ ಸ್ವತಂತ್ರ ಕಾರ್ಯಾಲಯವಾಗಿ ಪರಿವರ್ತನೆಗೊಂಡಿತು. ಜಿಲ್ಲಾ ಖಜಾನಾಧಿಕಾರಿಗಳು ಕಛೇರಿಯ ಮುಖ್ಯಸ್ಥರಾಗಿದ್ದು ೧೯೮೦ರಿಂದ ಸದರಿ ಹುದ್ದೆಯನ್ನು ಉಪ-ನಿರ್ದೇಶಕರು ಎಂದು ಬದಲಾಯಿಸಲಾಯಿತು. ಉಪ-ನಿರ್ದೇಶಕರು ಜಿಲ್ಲೆಯ ಎಲ್ಲಾ ತಾಲೂಕುಗಳ ಉಪ ಖಜಾನೆಗಳ ಮೇಲೆ ನಿಯಂತ್ರಣಾಧಿಕಾರವನ್ನು ಹೊಂದಿದ್ದಾರೆ. ಮಹಾಲೇಖಪಾಲರಿಗೆ ಲೆಕ್ಕ ಪತ್ರ ಸಲ್ಲಿಸುವುದು, ಲೆಕ್ಕ ಪತ್ರಗಳ ನಿರ್ವಹಣೆ, ಬಿಲ್ಲುಗಳನ್ನು ಅವುಗಳ ಶೀರ್ಷಿಕೆಯ ಆಧಾರದ ಮೇಲೆ ಲೆಕ್ಕ ತಯಾರಿಸುವುದು. ಮುಂತಾದ ಕಾರ್ಯ ಚಟುವಟಿಕೆಗಳು ಕಛೇರಿಯ ಕೆಲಸಗಳಾಗಿವೆ. ಲೆಕ್ಕಪತ್ರಗಳನ್ನು ಗಣಕೀಕರಣಗೊಳಿಸುವ ಯೋಜನೆಯನ್ನು ಕಾರ್ಯಾಲಯ ಹಾಕಿಕೊಂಡಿದೆ ಜಿಲ್ಲಾ ಕಛೇರಿಯು ೬೯ ಜನ ಸಿಬ್ಬಂದಿ ವರ್ಗ ಹೊಂದಿದ್ದು ತಾಲೂಕು ಮಟ್ಟದಲ್ಲಿ ಉಪ ಖಜಾನೆಗಳಲ್ಲಿಯ ಒಟ್ಟು ಸಿಬ್ಬಂದಿ ೯೭ ಆಗಿರುತ್ತದೆ. ಖಜಾನೆಗಳ ನಿರ್ದೇಶಕರು ಬೆಂಗಳೂರು ಇವರು ತತ್‌ಕ್ಷಣದ ಮೇಲಾಧಿಕಾರಿಗಳಾಗಿರುತ್ತಾರೆ.

## ತೋಟಗಾರಿಕೆ ಇಲಾಖೆ

ಜಿಲ್ಲಾ ತೋಟಗಾರಿಕೆ ಇಲಾಖೆಯ ಕಾರ್ಯಾಲಯವು ೧೯೯೨ರಲ್ಲಿ ಗುಲಬರ್ಗಾದಲ್ಲಿ ಪ್ರಾರಂಭಗೊಂಡು ಪ್ರಸ್ತುತ (೧೯೯೨ ರಿಂದ) ತೋಟಗಾರಿಕಾ ಉಪ-ನಿರ್ದೇಶಕರ ಕಾರ್ಯಾಲಯವಾಗಿ ಮಾರ್ಪಾಡು ಹೊಂದಿದೆ. ಹಾಗೂ ಜಿಲ್ಲಾ ಪಂಚಾಯತ್ ಗುಲಬರ್ಗಾ ನೇತೃತ್ವದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಈ ಕಛೇರಿಯ ಆಡಳಿತ ವ್ಯಾಪ್ತಿಗೆ ಸೇರಿದಂತೆ ತಾಲೂಕು ಮಟ್ಟದಲ್ಲಿ ತೋಟಗಾರಿಕಾ ಹಿರಿಯ ಸಹಾಯಕ ನಿರ್ದೇಶಕರು ತಮ್ಮ ಸಹಾಯಕ ಸಿಬ್ಬಂದಿಯೊಂದಿಗೆ ತಾಲೂಕು ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವರು. ತಾಲೂಕು ಮಟ್ಟದ ಕಾರ್ಯಲಯಗಳ ಕಾರ್ಯ ಚಟುವಟಿಕೆಗಳ ಮೇಲ್ವಿಚಾರಣೆ, ಜಿಲ್ಲಾ ಮಟ್ಟದ ಹಾಗೂ ರಾಜ್ಯ ಮಟ್ಟದ ಸಭೆಗಳಲ್ಲಿ ಇಲಾಖಾ ಚಟುವಟಿಕೆಗಳನ್ನು ಹಾಗೂ ಪ್ರಗತಿಯನ್ನು ಮಂಡಿಸುವುದು, ಜಿಲ್ಲೆಯ ತೋಟಗಾರಿಕೆಯ ಬಗ್ಗೆ ತಾಂತ್ರಿಕ ಮಾಹಿತಿ ನೀಡುವುದು, ರೈತರಿಗೆ ತರಬೇತಿ ನೀಡವುದು, ಹಣ್ಣು ಮತ್ತು ತರಕಾರಿ ಬೆಳೆ ಪ್ರದೇಶ, ಸಸ್ಯ ಅಭಿವೃಧಿ ಇವುಗಳ ನಿರ್ವಹಣೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಸರಕಾರದ ನಿಯಮದಂತೆ ತರಬೇತಿ ನೀಡವುದು ಮುಂತಾದ ಕಾರ್ಯ ಚಟುವಟಿಕೆಗಳನ್ನು ಜಿಲ್ಲಾ ಕಾರ್ಯಾಲಯವು ನಡೆಸಿಕೊಂಡು ಬರುವುದು. ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ಗುಲಬರ್ಗಾ ಹಾಗೂ ಜಂಟಿ ನಿರ್ದೇಶಕರು, ತೋಟಗಾರಿಕೆ ಗುಲಬರ್ಗಾ ಇವರು ತತ್‌ಕ್ಷಣದ ಮೇಲಾಧಿಕಾರಿಗಳಗಾಗಿರುತ್ತಾರೆ.

ತೋಟಗಾರಿಕೆ ಜಂಟಿ ನಿರ್ದೇಶಕರ ವಿಭಾಗೀಯ ಕಾರ್ಯಾಲಯವು ೧೯೯೨ರಲ್ಲಿ ಗುಲಬರ್ಗಾದಲ್ಲಿ ಸ್ಥಾಪನೆಗೊಂಡಿತು. ಇದಕ್ಕೂ ಮೊದಲು ಈ ಕಾರ್ಯಾಲಯವು ರಾಯಚೂರಿನಲ್ಲಿ ಕಾರ್ಯ ನಿರ್ವಹಿಸುತ್ತಿತ್ತು. ದಿ. ೮-೭-೯೨ರಲ್ಲಿ ಗುಲಬರ್ಗಾಕ್ಕೆ ವರ್ಗಾಯಿಸಲ್ಪಟ್ಟಿತು ಜಂಟಿ ನಿರ್ದೇಶಕರು ನಾಲ್ಕು ಜಿಲ್ಲೆಗಳಾದ ಬೀದರ್, ಗುಲಬರ್ಗಾ, ಬಳ್ಳಾರಿ ಮತ್ತು ರಾಯಚೂರುಗಳ ಕಾರ್ಯ ವ್ಯಾಪ್ತಿ ಹೊಂದಿರುವರು.

## ನೋಂದಣಿ ಹಾಗೂ ಮುದ್ರಾಂಕಗಳ ಇಲಾಖೆ

ಜಿಲ್ಲಾ ನೋಂದಣಾಧಿಕಾರಿಗಳು ಮತ್ತು ಮುದ್ರಾಂಕಗಳ ಉಪ-ಆಯುಕ್ತರರ ಕಛೇರಿಯು ಗುಲಬರ್ಗಾದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಆಧೀನ ಕಛೇರಿಗಳಲ್ಲಿಯ ಕಾರ್ಯ ನಿರ್ವಹಣೆಯನ್ನು ನಿಯಂತ್ರಿಸುವುದು ಮತ್ತು ಸಂಘ ಸಂಸ್ಥೆಗಳ ನೋಂದಣಿ ಮುಂತಾದ ಕಾರ್ಯ ಜವಾಬ್ದಾರಿಗಳನ್ನು ನಿರ್ವಹಿಸುವ ಉದ್ದೇಶ ಈ ಕಾರ್ಯಾಲಯದ್ದಾಗಿದೆ. ಜಿಲ್ಲಾ ನೋಂದಣಾಧಿಕಾರಿಗಳು ಮುಖ್ಯಾಧಿಕಾರಿಗಳಾಗಿದ್ದು, ಸಂಘ ಸಂಸ್ಥೆಗಳ ನೋಂದಣಿ ಅಧಿನಿಯಮ ೧೯೦೮, ಭಾರತೀಯ ಮುದ್ರಾಂಕಗಳ ಅಧಿನಿಯಮ ನೋಂದಣಿ ನಿಯಮಾವಳಿಗಳು, ಕರ್ನಾಟಕ ಮುದ್ರಾಂಕ ಅಧಿನಿಯಮಗಳು ಮುಂತಾದ ನಿಯಮಗಳನ್ನು ಕಾರ್ಯಾಲಯ ಜಾರಿಗೊಳಿಸುತ್ತಿದೆ. ಈ ಕಛೇರಿಯ ಅಧೀನದಲ್ಲಿ ತಾಲೂಕು ಮಟ್ಟದಲ್ಲಿ ಉಪನೋಂದಾಣಾಧಿಕಾರಿಗಳು ಕಾರ್ಯ ನಿರ್ವಹಿಸುತ್ತಿದ್ದು, ಅವರು ತಾಲೂಕು ಮಟ್ಟದ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವರು.

## ಪ್ರಾಚ್ಯವಸ್ತು ಇಲಾಖೆ

ಸರ್ಕಾರಿ ವಸ್ತು ಸಂಗ್ರಹಾಲಯವು ೧೯೬೪ರಲ್ಲಿ ಗುಲಬರ್ಗಾದಲ್ಲಿ ಪ್ರಾರಂಭಗೊಂಡಿದೆ. ಪ್ರಾಚೀನ ವಸ್ತುಗಳು ಮತ್ತು ಅಪೂರ್ವ ಕಲಾಕೃತಿಗಳನ್ನು ಸಾಮಾನ್ಯ ಜನತೆಗೆ ಪ್ರದರ್ಶಿಸಿ ಅವರಿಗೆ ಪರಿಚಯಿಸುವ ಉದ್ದೇಶ ಈ ಇಲಾಖೆಗೆ

ಇದ್ದು ಆ ದಿಶೆಯಲ್ಲಿ ವಸ್ತು ಸಂಗ್ರಹಾಲಯಗಳ ಸ್ಥಾಪನೆ ಅಭಿವೃದ್ಧಿ ಕಾರ್ಯವನ್ನು ಸರ್ಕಾರ ಕೈಗೊಂಡಿದೆ.ಸಹಾಯಕ ಮೇಲ್ವಿಚಾರಕರು (ಕ್ಯೂರೇಟರ್) ಈ ವಸ್ತು ಸಂಗ್ರಹಾಲಯದ ಮುಖ್ಯಸ್ಥರಾಗಿದ್ದು ಅದರ ಆಡಳಿತ ನಿರ್ವಹಣೆ ನೋಡಿಕೊಳ್ಳುವರು. ಈ ಪ್ರಾಚ್ಯವಸ್ತು ಸಂಗ್ರಹಾಲಯವು ಒಂದು:ಎರಡನೇ ಶತಮಾನದ ಮಣ್ಣಿನ ಪಳೆಯುಳಿಕೆಗಳ ಶಿಲಾ ವಿಗ್ರಹಗಳು ಅದರಲ್ಲಿಯೂ ಮುಖ್ಯವಾಗಿ ಬೌದ್ಧಧರ್ಮ ಪ್ರಚಾರಾರ್ಥವಾಗಿ ಬರೆದ ಶಿಲಾಲಿಪಿಗಳು, ಕಲ್ಯಾಣಿ ಚಾಲುಕ್ಯರ ಕಾಲದ ಜೈನ ವಿಗ್ರಹಗಳಾದ, ಪಾರ್ಶ್ವನಾಥ, ಕುಬೇರ,ಅಂಬಿಕಾ ಮತ್ತು ದ್ವಾರಪಾಲಕರು ಹಾಗೂ ಹಳೇ ಕಾಲದ ಖಡ್ಗ, ಕಠಾರಿ, ಚಿಲಕತ್ತು, ಕಿರೀಟಗಳಲ್ಲದೆ ಇತ್ತೀಚಿನ ಸನ್ನತಿಯ ಉತ್ಖನನಗಳಲ್ಲಿ ದೊರೆತ ಅವಶೇಷಗಳನ್ನು ಹೊಂದಿರುವುದು ಆಧುನಿಕ ಮತ್ತು ಗತಕಾಲದ ಮೈಸೂರು ಶೈಲಿಯ ಚಿತ್ರ, ಕಲಾಕೃತಿಗಳನ್ನು ಬೆಂಗಳೂರಿನ ವಸ್ತು ಸಂಗ್ರಹಾಲಯದಿಂದ ಖರೀದಿಸಿ ಅವುಗಳನ್ನು ಇಲ್ಲಿ ಪ್ರದರ್ಶಿಸಲಾಗಿದೆ. ಇಂಗ್ಲೆಂಡಿನ ಮೆಡೋಸ್ ಟೇಲರ್‌ರವರು ಉಪಯೋಗಿಸುತ್ತಿದ್ದ ಖುರ್ಚಿ ಹಾಗೂ ಚೀನಿ ಮಣ್ಣಿನ ಪಾತ್ರೆಗಳನ್ನು ಸಹ ಈ ಸಂಗ್ರಹಾಲಯದಲ್ಲಿ ಪ್ರದರ್ಶನಕ್ಕೆ ಇಡಲಾಗಿದೆ. ನಿರ್ದೇಶಕರು, ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು ಇವರು ಮೇಲಾಧಿಕಾರಿಗಳಾಗಿರುತ್ತಾರೆ.

**ಪಶುಪಾಲನೆ ಮತ್ತು ಪಶುವೈದ್ಯ ಸೇವಾ ಇಲಾಖೆ**

ಉಪ-ನಿರ್ದೇಶಕರು ಪಶುಪಾಲನೆ ಮತ್ತು ಪಶು ವೈದ್ಯ ಸೇವೆ ಇವರ ಕಾರ್ಯಾಲಯವು ಗುಲಬರ್ಗಾದಲ್ಲಿ ಇದ್ದು, ಪ್ರಾರಂಭದಲ್ಲಿ ಮುಖ್ಯಸ್ಥರ ಹುದ್ದೆಯ ಹೆಸರು ಸಹಾಯಕ ನಿರ್ದೇಶಕರು, ಪಶುಪಾಲನೆ ಎಂದು ಇದ್ದಿತು. ನಂತರದಲ್ಲಿ ಹಿರಿಯ ಸಹಾಯಕ ನಿರ್ದೇಶಕರು ಎಂದಾಯಿತು. ಪ್ರಸ್ತುತ, ಹುದ್ದೆ ಉನ್ನತೀಕರಣಗೊಂಡು ಉಪನಿರ್ದೇಶಕರು ಎಂದಾಗಿದೆ. ಜಿಲ್ಲೆಯ ಎಲ್ಲ ತಾಲೂಕುಗಳು ಇವರ ಆಡಳಿತ ವ್ಯಾಪ್ತಿಗೆ ಬರುತ್ತವೆ. ಉಪ-ನಿರ್ದೇಶಕರ ಕಾರ್ಯಾಲಯದಲ್ಲಿ ಅವರಿಗೆ ನೆರವಾಗಿ ೧೨ ಜನ ಸಹಾಯಕ ನಿರ್ದೇಶಕರು, ೪೦ ಜನ ಪಶು ವೈದ್ಯಾಧಿಕಾರಿಗಳು, ೮೬ ಜನ ಹಿರಿಯ ಪಶುವೈದ್ಯಕೀಯ ಪರೀಕ್ಷಕರು, ಮುಂತಾದ ಸಿಬ್ಬಂದಿ ವರ್ಗದವರು ಇದ್ದಾರೆ. ಜಾನುವಾರುಗಳನ್ನು ರೋಗರುಜಿನಗಳಿಂದ ಸಂರಕ್ಷಿಸುವುದು, ಪಶು ಸಂಪತ್ತು ಹಾಗೂ ಸಂತತಿಯನ್ನು ಕೃತಕ ಗರ್ಭಧಾರಣೆ ಹಾಗೂ ಸುಧಾರಿತ ತಳಿಗಳಾಗಿ ಅಭಿವೃದ್ಧಿ ಪಡಿಸುವುದು, ಇಲಾಖೆಗಳಿಗೆ ಸಂಬಂಧಿಸಿದ ಸಾಮಾಜಿಕ ಹಾಗೂ ಆರ್ಥಿಕ ಯೋಜನೆಗಳನ್ನು ಅಳವಡಿಸಿ ಅನುಷ್ಠಾನಗೊಳಿಸುವುದು, ಮೇವು ಅಭಿವೃದ್ಧಿ ಹಾಗೂ ಪಶು ಆಹಾರ ಅಭಿವೃದ್ಧಿ, ಬರಡು ರಾಸುಗಳ ಚಿಕಿತ್ಸಾ ಶಿಬಿರಗಳು, ಸಂಚಾರಿ ಚಿಕಿತ್ಸಾ ಸೌಲಭ್ಯ ಮುಂತಾದ ಕಾರ್ಯಚಟುವಟಿಕೆಗಳನ್ನು ಈ ಕಾರ್ಯಾಲಯ ನಡೆಸಿಕೊಂಡು ಬರುತ್ತಿದೆ. ವಿಶೇಷ ಘಟಕ ಯೋಜನೆಯಡಿ ಹಲವಾರು ಅಭಿವೃದ್ಧಿ ಯೋಜನೆಗಳನ್ನು ಈ ಕಛೇರಿಯು ನಿರ್ವಹಿಸುವುದು, ೨೯ ಮಿಶ್ರ ತಳಿ ಘಟಕಗಳ ಸ್ಥಾಪನೆ, ೩೮ ಕುರಿ ಘಟಕಗಳ ಸ್ಥಾಪನೆ ಜನ ಯೋಜನೆಯಡಿ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದ ಜನರಿಗೆ ೨೦ ಮಿಶ್ರ ಆಕಳುಗಳ ಘಟಕ, ೪೬ ಎಮ್ಮೆ ಘಟಕ, ೩೦ ಕುರಿ ಘಟಕಗಳ ಸ್ಥಾಪನೆಗಾಗಿ ಘಟಕದ ವೆಚ್ಚದ ೭೫ ಶೇಕಡ ಸಹಾಯಧನ ವಿತರಿಸುವುದು, ತಾಲೂಕು ಮಟ್ಟದ ಕಛೇರಿಯ ಆಡಳಿತ ನಿರ್ವಹಣೆಯನ್ನು ಸಹಾಯಕ ನಿರ್ದೇಶಕರು ಮಾಡುವರು. ಜಂಟಿ ನಿರ್ದೇಶಕರು ಪಶುಪಾಲನೆ ಹಾಗೂ ಪಶುವೈದ್ಯ ಸೇವೆ ಇವರ ವಿಭಾಗೀಯ ಕಾರ್ಯಾಲಯವು ಗುಲಬರ್ಗಾದಲ್ಲಿ ಇದ್ದು, ಬೀದರ್, ಗುಲಬರ್ಗಾ, ರಾಯಚೂರು ಬಳ್ಳಾರಿ ಈ ಜಿಲ್ಲೆಗಳ ಮೇಲ್ವಿಚಾರಣೆ ಹಾಗೂ ಆಡಳಿತಾಧಿಕಾರ್ಯವನ್ನು ಅವರು ಹೊಂದಿರುವರು.

**ಭೂ ಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ**

ಜಂಟಿ ನಿರ್ದೇಶಕರು, ಭೂ ದಾಖಲೆಗಳು, ಗುಲಬರ್ಗಾ ವಿಭಾಗ, ಇವರ ಕಾರ್ಯಾಲಯವು ೧೯೭೨ರಲ್ಲಿ ಗುಲಬರ್ಗಾದಲ್ಲಿ ಪ್ರಾರಂಭಗೊಂಡಿತು. ಗುಲಬರ್ಗಾ, ಬೀದರ್ ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳ ಅಧಿಕಾರ ವ್ಯಾಪ್ತಿಯನ್ನು ಜಂಟಿ ನಿರ್ದೇಶಕರು ಹೊಂದಿರುವರು. ವಿಭಾಗದ ಭೂ ದಾಖಲೆಗಳ ನಿರ್ವಹಣೆ, ಘೋಷಣೆ ಮತ್ತು ಜಮೀನು ಅಳತೆ, ಸೋಡಿ ಪ್ರಕರಣ, ನಗರ ಮಾಪನ, ನಿರ್ವಹಣೆ ಮತ್ತು ಭೂ ಕಂದಾಯ ಕಾರ್ಯಕಲಾಪಗಳ ಸಂಪೂರ್ಣ ಮೇಲ್ವಿಚಾರಕಣೆ ಮತ್ತು ನಿಯಂತ್ರಣ ಅಲ್ಲದೆ ವಿಭಾಗಾಧಿಕಾರಿಗಳಿಗೆ ತಾಂತ್ರಿಕ ವಿಷಯ ಕುರಿತು ಸಲಹೆ, ಸೂಚನೆ ನೀಡುವುದು ಈ ಕಾರ್ಯಾಲಯದ ಕಾರ್ಯ ಜವಾಬ್ದಾರಿಗಳಾಗಿವೆ. ಭೂ ಕಂದಾಯ ಅಧಿನಿಯಮ ಮತ್ತು ನಿಯಮಗಳು, ಭೂ ಸುಧಾರಣೆ ಮತ್ತು ಭೂ ಮಂಜೂರಿತಿ ನಿಯಮಗಳನ್ನು ಈ ಕಾರ್ಯಾಲಯ ಅನ್ವಯಗೊಳಿಸುತ್ತಿದೆ. ಜಂಟಿ ನಿರ್ದೇಶಕರ

ಅಧೀನದಲ್ಲಿ ಇಬ್ಬರು ಭೂ ದಾಖಲೆಗಳ ಉಪ-ನಿರ್ದೇಶಕರುಗಳು ಮತ್ತು ಎರಡು ನಗರ ಮಾಪನ ಕಛೇರಿಗಳು ಕಾರ್ಯ ನಿರ್ವಹಿಸುತ್ತಿವೆ.

## ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ ಇಲಾಖೆ

ಮಹಿಳೆಯರ ಮತ್ತು ಮಕ್ಕಳ ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನದ ದೃಷ್ಟಿಯಿಂದ ಸಹಾಯಕ ನಿರ್ದೇಶಕರು ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ ಇಲಾಖಾ ಕಛೇರಿಯು ೧೯೮೪ರಲ್ಲಿ ಗುಲಬರ್ಗಾದಲ್ಲಿ ಕಾರ್ಯಾರಂಭ ಮಾಡಿತು. ಜಿಲ್ಲಾವ್ಯಾಪ್ತಿ ಅಧಿಕಾರ ಹೊಂದಿರುವ ಸಹಾಯಕ ನಿರ್ದೇಶಕರು ಕಾರ್ಯಾಲಯದ ಮುಖ್ಯಾಧಿಕಾರಿಗಳಾಗಿರುವರು. ಮಹಿಳೆಯರ ಮತ್ತು ಮಕ್ಕಳ ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುವುದು ಕಛೇರಿಯ ಮುಖ್ಯ ಕಾರ್ಯ ಚಟುವಟಿಕೆಗಳಾಗಿವೆ. ಬಾಲಾಪರಾಧಿಗಳ ನ್ಯಾಯದಾನ (ಜುವೆನೈಲ ಜಸ್ಟೀಸ್) ಅಧಿನಿಯಮ ೧೯೮೬, ಮಹಿಳೆಯರ ಅನೀತಿಕರ ವ್ಯವಹಾರಗಳ ತಡೆ, ರೂಢಪರಾಧಿಗಳ ಅಧಿನಿಯಮ ೧೯೫೮ಗಳನ್ನು ಈ ಕಾರ್ಯಾಲಯ ಅನ್ವಯಗೊಳಿಸುತ್ತಿದೆ.

ಜಿಲ್ಲಾ ವಲಯ ಯೋಜನೆಗಳ ಅಡಿ ೧) ಉದ್ಯೋಗಸ್ಥ ಮಹಿಳೆಯರ ಮಕ್ಕಳಿಗಾಗಿ ಶಿಶುಪಾಲನಾ ಕೇಂದ್ರಗಳು, ೨) ತಾಲೂಕು ಮಟ್ಟದ ಸಂಘಗಳು, ೩) ವಿಧವೆಯರ ಮತ್ತು ದೇವದಾಸಿಯರ ಪುನರ್ ವಸತಿ, ೪) ಸಮಗ್ರ ಮಕ್ಕಳ ಅಭಿವೃದ್ಧಿ ಸೇವೆಗಾಗಿ ಕೇಂದ್ರ ಪುರಸ್ಕೃತ ಯೋಜನೆ ಹಾಗೂ ಶಾಲಾ ಪೂರ್ವ ಮಕ್ಕಳಿಗೆ ಊಟದ ಯೋಜನೆ ಇದಲ್ಲದೆ ರಾಜ್ಯ ಯೋಜನೆಗಳ ಅಡಿ ೧) ಬಾಲವಿವಾಹ ಯೋಜನೆ ವಿಸ್ತರಣೆ, ೨) ೫-೧೦ ವರ್ಷ ವಯಸ್ಸಿನ ಬಾಲಕಿಯರಿಗೆ ವಿದ್ಯಾರ್ಥಿವೇತನ, ೩) ಬಾಲಕಾರ್ಮಿಕರ ಕಲ್ಯಾಣ ಯೋಜನೆ, ೪) ಮಹಿಳೆಯರ ವೃತ್ತಿ ಶಿಕ್ಷಣ ಪಡೆಯಲು ಧನ ಸಹಾಯ ಯೋಜನೆ, ೫) ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ ಪಡೆಯಲು ಮಹಿಳೆಯರಿಗೆ ಆರ್ಥಿಕ ನೆರವು ೬) ಪಂಚಾಯತ್ ರಾಜ್ಯ ಮಹಿಳಾ ಸದಸ್ಯರಿಗೆ ತರಬೇತಿ ಕಾರ್ಯಕ್ರಮ ಮತ್ತು ೭) ಮಹಿಳಾ ಸಮೃದ್ಧಿ ಯೋಜನೆ ಹಾಗೂ ಮನೆ ಬೆಳಕು ಯೋಜನೆ ಮುಂತಾದ ಯೋಜನೆಗಳನ್ನು ಈ ಕಾರ್ಯಾಲಯ ಅನುಷ್ಠಾನಗೊಳಿಸುತ್ತಿದೆ.

## ಮೀನುಗಾರಿಕೆ ಇಲಾಖೆ

ಮೀನುಗಾರಿಕೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರ ಕಛೇರಿಯು (ಜಿಲ್ಲಾ ಪಂಚಾಯತ್‌ಗೆ ಒಳಪಟ್ಟಿದ್ದು) ಗುಲಬರ್ಗಾದಲ್ಲಿ ೧೯೫೬ರಿಂದಲೂ ಅಸ್ತಿತ್ವದಲ್ಲಿದೆ. ಗುಲಬರ್ಗಾ ಜಿಲ್ಲೆಯಲ್ಲಿ ಮೀನುಗಾರಿಕೆ ಅಭಿವೃದ್ಧಿ ಕೆರೆಗಳ ವಿಲೇವಾರಿ, ಮೀನುಮರಿಗಳ ಸರಬರಾಜು ಇವೇ ಮುಂತಾದ ಕಾರ್ಯ ಚಟುವಟಿಕೆಗಳು ಈ ಕಛೇರಿಯಿಂದ ಕಾರ್ಯಗತಗೊಳ್ಳುತ್ತಿವೆ. ಹಿರಿಯ ಸಹಾಯಕ ನಿರ್ದೇಶಕರು ಕಛೇರಿಯ ಮುಖ್ಯಾಧಿಕಾರಿಗಳಾಗಿದ್ದು, ಅಧೀನ ಕಛೇರಿಗಳು ಗುಲಬರ್ಗಾ, ಚಿಂಚೋಳಿ, ಶಹಾಪುರ, ಸುರಪುರ, ಯಾದಗಿರಿ ಹಾಗೂ ಹತ್ತಿಕುಣಿ (ಯಾದಗಿರಿ ತಾಲೂಕು) ಗಳಲ್ಲಿದ್ದು ಸಹಾಯಕ ನಿರ್ದೇಶಕರುಗಳು ಆಯಾ ಕಛೇರಿಗಳ ಮುಖ್ಯಸ್ಥರಾಗಿರುತ್ತಾರೆ. ಮೀನುಗಾರಿಕೆಯ ಉಪನಿರ್ದೇಶಕರು, ವಲಯ ಕಛೇರಿ ಬಳ್ಳಾರಿ ಇವರು ತತ್‌ಕ್ಷಣದ ಮೇಲಾಧಿಕಾರಿಯಾಗಿರುತ್ತಾರೆ.

## ಮುದ್ರಣ ಲೇಖನ ಸಾಮಗ್ರಿ ಮತ್ತು ಪ್ರಕಟಣೆ ಇಲಾಖೆ

ಗುಲಬರ್ಗಾ ವಿಭಾಗದ ಸರ್ಕಾರಿ ಕಛೇರಿಗಳ ಮುದ್ರಣದ ಅಗತ್ಯತೆಯನ್ನು ಪೂರೈಸುವ ಉದ್ದೇಶದಿಂದ ಉಪ-ನಿರ್ದೇಶಕರು ಸರ್ಕಾರಿ ಶಾಖಾ ಮುದ್ರಣಾಲಯವು ೧೯೬೩ರಲ್ಲಿ ಗುಲಬರ್ಗಾ ಹಳೆಯ ಜೈಲು ಆವರಣದಲ್ಲಿ ಪ್ರಾರಂಭಗೊಂಡಿತು. ೧೯೬೯ರಲ್ಲಿ ಮುದ್ರಣಾಲಯವು ಈಗಿರುವ ಕಟ್ಟಡಕ್ಕೆ ಸ್ಥಳಾಂತರಗೊಂಡಿತು. ಪ್ರಾರಂಭದಲ್ಲಿ ಸಹಾಯಕ ನಿರ್ದೇಶಕರು ಮುದ್ರಣಾಲಯದ ಮುಖ್ಯಸ್ಥರಾಗಿದ್ದು, ೧೯೬೪-೬೫ರಲ್ಲಿ ಹುದ್ದೆಯು ಈಗಿರುವಂತೆ, ಉಪ-ನಿರ್ದೇಶಕರು ಆಗಿ ಬದಲಾವಣೆ ಹೊಂದಿದೆ. ಇದು ವಿಭಾಗದ ಮಟ್ಟದ ಕಾರ್ಯಾಲಯವಾಗಿದೆ. ಸಾಮಾನ್ಯ ಅರ್ಜಿ ಹಾಗೂ ನಮೂನೆಗಳನ್ನು ಮುದ್ರಿಸಿ ಸರಬರಾಜು ಮಾಡುವುದು, ೧೯೭೪-೭೫ರಿಂದ ರಾಜ್ಯಪತ್ರ ಭಾಗ - ೯ರ ಮುದ್ರಣ ಹಾಗೂ ಸರಬರಾಜು, ೧೯೬೩ರಿಂದ ನ್ಯಾಯಾಲಯದ ಅರ್ಜಿ ನಮೂನೆಗಳನ್ನು ಮುದ್ರಿಸಿ ಕರ್ನಾಟಕ ರಾಜ್ಯಕ್ಕೆ ಸರಬರಾಜು ಮಾಡುವುದು. ಇವೇ ಮುಂತಾದುವು ಕಛೇರಿಯ ಕಾರ್ಯಚಟುವಟಿಕೆಗಳಾಗಿವೆ. ಸಹಾಯಕ ನಿರ್ದೇಶಕರು, ಪಠ್ಯಪುಸ್ತಕ ಮುದ್ರಣಾಲಯ ಕಾರ್ಯಾಲಯವು ೧೯೮೦-೮೧ರಲ್ಲಿ ಗುಲಬರ್ಗಾದಲ್ಲಿ ಪ್ರಾರಂಭಗೊಂಡಿತು. ಅಲ್ಪಸಂಖ್ಯಾತ ಭಾಷೆಗಳಾದ

ಮರಾಠಿ, ಹಿಂದಿ, ಉರ್ದು ಹಾಗೂ ತೆಲುಗು ಪಠ್ಯ ಪುಸ್ತಕಗಳ ಮುದ್ರಣ ಹಾಗೂ ಸರಬರಾಜು, ಈ ಕಾರ್ಯಾಲಯದ ಮುಖ್ಯ ಚಟುವಟಿಕೆಯಾಗಿದೆ. ಜಂಟಿ ನಿರ್ದೇಶಕರು ಸರ್ಕಾರಿ ಪಠ್ಯಪುಸ್ತಕ ಮುದ್ರಣಾಲಯ ಮೈಸೂರು ಇವರು ತತ್‌ಕ್ಷಣದ ಮೇಲಾಧಿಕಾರಿಗಳಾಗಿರುತ್ತಾರೆ.

**ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ**

ಜಿಲ್ಲಾ ಯುವಜನ ಸೇವಾ ಮತ್ತು ಕ್ರೀಡಾಧಿಕಾರಿಗಳ ಕಛೇರಿಯು ೧೯೯೨ರಲ್ಲಿ ಗುಲಬರ್ಗಾದಲ್ಲಿ ಪ್ರಾರಂಭಗೊಂಡಿತು. ಇದಕ್ಕೂ ಪೂರ್ವದಲ್ಲಿ ಇದು ಜಿಲ್ಲಾ ಯೋಜನಾಧಿಕಾರಿಗಳ ಹತೋಟಿಯಲ್ಲಿತ್ತು. ಪ್ರಸ್ತುತ ಜಿಲ್ಲಾ ಯುವಜನ ಸೇವಾ ಹಾಗೂ ಕ್ರೀಡಾಧಿಕಾರಿಗಳು ಕಛೇರಿಯ ಮುಖ್ಯಸ್ಥರಿದ್ದು ಜಿಲ್ಲಾ ಯುವಜನ ಸೇವಾ ಹಾಗೂ ಕ್ರೀಡಾಧಿಕಾರಿಗಳು ಕಛೇರಿಯ ಮುಖ್ಯಸ್ಥರಿದ್ದು ಜಿಲ್ಲಾ ವ್ಯಾಪ್ತಿಯ ಅಧಿಕಾರ ಹೊಂದಿರುವರು. ಗ್ರಾಮೀಣ ಯುವಕರಲ್ಲಿ ಕ್ರೀಡಾ ಮನೋಭಾವ ಬೆಳೆಸುವುದು ಹಾಗೂ ಕ್ರೀಡಾಭಿವೃದ್ಧಿಗೆ ಉತ್ತೇಜನ ನೀಡುವ ಉದ್ದೇಶವನ್ನು ಈ ಕಾರ್ಯಾಲಯ ಹೊಂದಿದೆ. ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದ ಕ್ರೀಡಾಕೂಟ, ದಸರಾಕ್ರೀಡಾ ಕೂಟ, ಗ್ರಾಮಾಂತರ ಕ್ರೀಡಾಕೂಟ, ಮಹಿಳಾ ಕ್ರೀಡಾಕೂಟ ಯುವಜನ ಮೇಳ ಹಾಗೂ ಸರ್ಕಾರಿ ನೌಕರರ ಕ್ರೀಡಾಕೂಟಗಳನ್ನು ಕಾಲಕಾಲಕ್ಕೆ ನಡೆಸುತ್ತಿದೆ. ಕ್ರೀಡಾ ಸಾಮಗ್ರಿ ಪೂರೈಕೆ, ಒಳಾಂಗಣ ಕ್ರೀಡಾಂಗಣ ಮತ್ತು ರಂಗಮಂದಿರಗಳ ನಿರ್ಮಾಣ, ಗ್ರಾಮಾಂತರ ಪ್ರದೇಶಗಳಲ್ಲಿ ಕ್ರೀಡಾ ತರಬೇತಿ ಶಿಬಿರ ಏರ್ಪಡಿಸುವಿಕೆ ಮುಂತಾದ ಯೋಜನೆ ಹಾಗೂ ಅಭಿವೃದ್ಧಿ ಚಟುವಟಿಕೆಗಳನ್ನು ಈ ಕಾರ್ಯಾಲಯ ನಿರ್ವಹಿಸುತ್ತಿದೆ. ತಾಲೂಕು ಮಟ್ಟದಲ್ಲಿ ಸಹಾಯಕ ಯುವಜನ ಸೇವಾ ಮತ್ತು ಕ್ರೀಡಾಧಿಕಾರಿಗಳು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವರು.

**ರೇಷ್ಮೆ ಇಲಾಖೆ**

ಇತ್ತೀಚಿನ ದಶಕಗಳವರೆಗೆ ಗುಲಬರ್ಗಾ ಪ್ರದೇಶಗಳಲ್ಲಿ ಅಪರಿಚಿತವಾದ ರೇಷ್ಮೆ ವ್ಯವಸಾಯವನ್ನು ಪ್ರೋತ್ಸಾಹಿಸಲು ಪ್ರೇರಕವಾಗುವಂತೆ ರೇಷ್ಮೆ ಉಪ-ನಿರ್ದೇಶಕರ ಕಛೇರಿಯು ೧೯೮೨ರಲ್ಲಿ ಗುಲಬರ್ಗಾದಲ್ಲಿ ಪ್ರಾರಂಭಗೊಂಡಿದೆ. ತಾಂತ್ರಿಕ ಸೇವಾ ಕೇಂದ್ರಗಳು ಮಾಡಿರುವ ರೇಷ್ಮೆ ವ್ಯವಸಾಯದ ಬಗ್ಗೆ ಪ್ರಚಾರ ನೀಡುವುದು, ನಾಟಿ ಮಾಡಿರುವ ತೋಟಗಳ ವೀಕ್ಷಣೆ, ತಾಂತ್ರಿಕ ಸಲಹೆ, ಕೇಂದ್ರಗಳ ನಿರೀಕ್ಷಣೆ ಹಾಗೂ ಸೇವಾ ಕೇಂದ್ರಗಳಿಗೆ ಸಂಬಂಧಿಸಿದ ಆಡಳಿತ ಕೆಲಸಗಳು ಈ ಕಾರ್ಯಾಲಯದ ಕಾರ್ಯ ಚಟುವಟಿಕೆಗಳಾಗಿವೆ. ಉಪ-ನಿರ್ದೇಶಕರು ಗುಲಬರ್ಗಾ ಜಿಲ್ಲಾ ಅಧಿಕಾರ ವ್ಯಾಪ್ತಿ ಹೊಂದಿರುವರು ರೇಷ್ಮೆ ಕೃಷಿ ಕ್ಷೇತ್ರಗಳ ಅಭಿವೃದ್ಧಿ ಪ್ರಚಾರ ಕಾರ್ಯಕ್ರಮಗಳು, ತರಬೇತಿ ಕಾರ್ಯಕ್ರಗಳು ಬೈವೊಲ್ಟಿನ ಗೂಡಿಗೆ ಸಹಾಯಧನ, ಹುಳು ಸಾಕಾಣಿಕೆಗಳಿಗೆ ಸಲಕರಣೆಗಳನ್ನು ಕೊಳ್ಳಲು ಸಹಾಯಧನ, ರೋಗ ನಿಯಂತ್ರಣ ಕಾರ್ಯಕ್ರಮಗಳು, ಸಾಮೂಹಿಕ ವಸತಿ ಮತ್ತು ನೂಲು ಬಿಚ್ಚುವ ಶೆಡ್ಡುಗಳ ನಿರ್ಮಾಣ, ಮಹಿಳಾ ಪ್ರಾತ್ಯಕ್ಷಿಕಾ ಕ್ಷೇತ್ರ ಹಾಗೂ ವಿಶೇಷ ಘಟಕ ಯೋಜನೆಯಡಿಯಲ್ಲಿ ಸಮೂದಾಯ ಅಭಿವೃದ್ಧಿ ಕೇಂದ್ರಗಳ ನಿರ್ವಹಣೆ, ನೀರಾವರಿ ಬಾವಿಗಳಿಗೆ ಧನ ಸಹಾಯ, ಹುಳು ಸಾಕಾಣಿಕೆ ಹಾಗೂ ಮನೆಗಳ ನಿರ್ಮಾಣಕ್ಕೆ ಧನ ಸಹಾಯ ಮುಂತಾದ ಅಭಿವೃದ್ಧಿ ಚಟುವಟಿಕೆ ಹಾಗೂ ಯೋಜನೆಗಳನ್ನು ಈ ಕಛೇರಿಯು ಕಾರ್ಯಗತಗೊಳಿಸುತ್ತಿದೆ. ಜಿಲ್ಲೆಯಲ್ಲಿ ೧೦ ತಾಂತ್ರಿಕ ಸೇವಾ ಕೇಂದ್ರಗಳು ಮತ್ತು ೪೩ ಚಾಕಿ ಸಾಗಾಣಿಕೆ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ೩೦೦೦ ಸಾವಿರ ಎಕರೆಗಳಲ್ಲಿ ರೇಷ್ಮೆವ್ಯವಸಾಯವಿದ್ದು ೨೮೦೦ ಜನರ ರೇಷ್ಮೆ ವ್ಯವಸಾಯ ಕೈಗೊಂಡಿದ್ದು ಅವರಲ್ಲಿ ೫೫೮ ಜನ ಪರಿಶಿಷ್ಟ ಜಾತಿ : ಪಂಗಡಕ್ಕೆ ಸೇರಿದವರು ಇರುವರು ತಾಲೂಕು ಮಟ್ಟದಲ್ಲಿ ರೇಷ್ಮೆ ಸಹಾಯಕ ನಿರ್ದೇಶಕರು ಕಾರ್ಯ ನಿರ್ವಹಿಸುತ್ತಿರುವರು. ರೇಷ್ಮೆ ಜಂಟಿ ನಿರ್ದೇಶಕರು, ಗುಲಬರ್ಗಾ ಇವರು ತತ್‌ಕ್ಷಣದ ಮೇಲಾಧಿಕಾರಿಗಳು ಆಗಿದ್ದಾರೆ.

**ಲೋಕ ಶಿಕ್ಷಣ ಇಲಾಖೆ**

ಜಿಲ್ಲಾ ವಯಸ್ಕ ಶಿಕ್ಷಣಾಧಿಕಾರಿಗಳ ಕಛೇರಿಯು ೧೯೮೩ರಲ್ಲಿ ಗುಲಬರ್ಗಾದಲ್ಲಿ ಪ್ರಾರಂಭಗೊಂಡಿತು. ಇದು ೧೯೮೭ರಿಂದ ಜಿಲ್ಲಾ ಪಂಚಾಯತ್ ಆಡಳಿತಕ್ಕೆ ಒಳಪಟ್ಟಿದೆ. ಜಿಲ್ಲಾ ವಯಸ್ಕ ಶಿಕ್ಷಣಾಧಿಕಾರಿಗಳು ಕಾರ್ಯಾಲಯದ ಮುಖ್ಯಸ್ಥರಾಗಿದ್ದು, ಜನ ಶಿಕ್ಷಣನಿಲಯದಿಂದ ನವ ಸಾಕ್ಷರರಿಗಾಗಿ ಪುಸ್ತಕ ಭಂಡಾರದ ಮೂಲಕ ಶಿಕ್ಷಣ ನೀಡುವುದು,

ಸಾಕ್ಷರತಾ ಪ್ರೇರಣೆ ಮತ್ತು ವಿವಿಧ ಯೋಜನೆಗಳ ಬಗ್ಗೆ ಅರಿವು ಮೂಡಿಸುವುದು ಮತ್ತು ಜನಶಿಕ್ಷಣ ನಿಲಯದ ಪ್ರೇರಕರಿಂದ ಆಟಪಾಟ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ವ್ಯವಸ್ಥೆ ಮುಂತಾದ ಕಾರ್ಯ ಚಟುವಟಿಕೆಗಳನ್ನು ಈ ಕಾರ್ಯಾಲಯ ನಡೆಸಿಕೊಂಡು ಬರುತ್ತಿದೆ. ರಾಜ್ಯ ಯೋಜನೆಯಡಿಯಲ್ಲಿ ಈ ಜಿಲ್ಲೆಯಲ್ಲಿ ಒಟ್ಟು ೩೭ ಜನಶಿಕ್ಷಣ ನಿಲಯಗಳನ್ನು ಪ್ರಾರಂಭಿಸಲಾಗಿದೆ. ಅವುಗಳು ಅನುಕ್ರಮವಾಗಿ ಚಿತ್ತಾಪುರ ತಾಲೂಕಿನಲ್ಲಿ ೧೩ ಸೇಡಂ ತಾಲೂಕಿನಲ್ಲಿ ೧೧ ಹಾಗೂ ಯಾದಗಿರಿ ತಾಲೂಕಿನಲ್ಲಿ ೧೩, ಕಾರ್ಯ ನಿರ್ವಹಿಸುತ್ತಿರುವುವು ಈ ನಿಲಯಗಳಲ್ಲೂ ವಾಚನಾಲಯ, ಪುಸ್ತಕ ಭಂಡಾರ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುವ ವ್ಯವಸ್ಥೆ ಇದೆ. ಕೇಂದ್ರ ಯೋಜನೆಯಡಿಯಲ್ಲಿ ಇನ್ನೂ ೭೮ ಜನ ಶಿಕ್ಷಣ ನಿಲಯಗಳನ್ನು ಪ್ರಾರಂಭಿಸಲಾಗಿದ್ದು ಅವುಗಳು ತಾಲೂಕುವಾರು ಹಂಚಿಕೆ ಈ ರೀತಿ ಇರುವುದು : ಆಳಂದ - ೧೭, ಅಫಜಲ್‌ಪುರ - ೧೨, ಗುಲಬರ್ಗಾ - ೧೨, ಶಹಾಪುರ - ೧೫, ಸುರಪುರ - ೧೧ ಹಾಗೂ ಜೇವರ್ಗಿ - ೧೧.

## ಲೋಕೋಪಯೋಗಿ ಇಲಾಖೆ

ಅಧೀಕ್ಷಕ ಅಭಿಯಂತರವರ ಕಾರ್ಯಾಲಯವು ಗುಲಬರ್ಗಾದಲ್ಲಿ ೧೯೬೨ರಿಂದ ಕಾರ್ಯಾರಂಭ ಮಾಡಿದೆ. ಇದು ಒಂದು ವಲಯ ಕಛೇರಿ ಆಗಿದ್ದು ಗುಲಬರ್ಗಾ, ಯಾದಗಿರಿ ಹಾಗೂ ಬೀದರ ವಿಭಾಗಗಳ ಆಡಳಿತಾಧಿಕಾರವು ಈ ಕಾರ್ಯಾಲಯದ್ದಾಗಿದೆ. ಅಧೀಕ್ಷಕ ಇಂಜಿನಿಯರು ಈ ವೃತ್ತ ಕಛೇರಿಯ ಮುಖ್ಯಸ್ಥರಾಗಿದ್ದು ಅವರ ನೆರವಿಗೆ ತಾಂತ್ರಿಕ ಸಹಾಯಕರು, ರಿಜಿಸ್ಟಾರರು,ಸಹಾಯಕ ಅಭಿಯಂತರುಗಳು ಹಾಗೂ ಇನ್ನಿತರ ಸಿಬ್ಬಂದಿ ಇದೆ. ವಿಭಾಗ ಮಟ್ಟದಲ್ಲಿಯ ಕಾರ್ಯಾಲಯಗಳಾದ ಗುಲಬರ್ಗಾ ಹಾಗೂ ಯಾದಗಿರಿಗಳು ಕಾರ್ಯ ನಿರ್ವಾಹಕ ಅಭಿಯಂತರರ ಕಛೇರಿಗಳಾಗಿದ್ದು ಅವರ ಅಧಿಕಾರ ವ್ಯಾಪ್ತಿಗೆ ಒಳಪಡುತ್ತವೆ. ಅದರಂತೆ ಉಪ ವಿಭಾಗದ ಕಛೇರಿಗಳು ತಾಲೂಕು ಮಟ್ಟದ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರುಗಳ ಮುಖ್ಯಸ್ಥತೆಯಲ್ಲಿ ಕಾರ್ಯ ನಿರ್ವಹಿಸುತ್ತವೆ. ಸಾರ್ವಜನಿಕ ಅನುಕೂಲಕ್ಕಾಗಿ ಉಪಯೋಗಿಸಲ್ಪಡುವ ಸೇತುವೆಗಳ ನಿರ್ಮಾಣ ಹಾಗೂ ಉಸ್ತುವಾರಿ, ಸರ್ಕಾರಿ ಕಟ್ಟಡಗಳು, ಇಲಾಖಾ ಕಟ್ಟಡಗಳು, ಮತ್ತು ಶಾಲಾ ಕಟ್ಟಡಗಳು ನಿರ್ಮಾಣ ಹಾಗೂ ನಿರ್ವಹಣೆಯ ಉದ್ದೇಶವನ್ನು ಈ ಕಾರ್ಯಾಲಯ ಹೊಂದಿದೆ. ಮತ್ತು ಯೋಜನೆಗಳ ಅನ್ವಯ ಕಾರ್ಯ ನಿರ್ವಹಿಸುತ್ತಿದೆ. ಇದಲ್ಲದೆ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಯೋಜನೆಯಡಿಯಲ್ಲಿ ಹಲವಾರು ಕಾಮಗಾರಿಗಳನ್ನು ಅನುಷ್ಠಾನಗೊಳಿಸುತ್ತಿದೆ. ಮುಖ್ಯ ಅಭಿಯಂತರರು ಲೋಕೋಪಯೋಗಿ ಇಲಾಖೆ, ಸಂಪರ್ಕ ಮತ್ತು ಕಟ್ಟಡಗಳು (ಉತ್ತರ) ಧಾರವಾಡ ಇವರು ತತ್‌ಕ್ಷಣದ ಮೇಲಾಧಿಕಾರಿಗಳಾಗಿರುತ್ತಾರೆ.

## ವಾಣಿಜ್ಯ ತೆರಿಗೆಗಳ ಇಲಾಖೆ

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ) ಗುಲಬರ್ಗಾ ವಿಭಾಗ ೧೯೫೭ರಿಂದ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಪ್ರಾರಂಭದಲ್ಲಿ ವಾಣಿಜ್ಯ ತೆರಿಗೆಯ ಉಪ-ಆಯುಕ್ತರು (ಆಡಳಿತ ಮತ್ತು ಗುಪ್ತವಾರ್ತೆ) ಎಂಬ ಹುದ್ದೆಯ ಪದನಾಮದಿಂದ ಬಳ್ಳಾರಿ ಕೇಂದ್ರ ಕಛೇರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದು, ೧೯೮೪ರಲ್ಲಿ ಅವರು ಕೇವಲ ಗುಲಬರ್ಗಾ, ಬೀದರ್ ಮತ್ತು ರಾಯಚೂರು ಜಿಲ್ಲೆಗಳ ಅಧಿಕಾರ ವ್ಯಾಪ್ತಿ ಹೊಂದಿದ್ದರು ನಂತರ ೧೯೯೨ರಲ್ಲಿ ಹುದ್ದೆಯ ಹೆಸರು ಈಗಿರುವಂತೆ ವಾಣಿಜ್ಯ ತೆರಿಗೆ ಜಂಟಿ ಗುಲಬರ್ಗಾ ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರವನ್ನು ಇವರು ಹೊಂದಿರುವರು. ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಅಡಳಿತ) ಎಂದು ಬದಲಾವಣೆ ಹೊಂದಿದೆ. ಬೀದರ್, ರಾಯಚೂರು ಹಾಗೂ ಗುಲಬರ್ಗಾ ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರವನ್ನು ಇವರು ಹೊಂದಿರುವರು. ವಾಣಿಜ್ಯ ತೆರಿಗೆಗಳ ಉಪ-ಆಯುಕ್ತರು - ವೃತ್ತ ೧, ೨, ಹಾಗೂ ೩ ಗುಲಬರ್ಗಾ, ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು, ಯಾದಗಿರಿ, ವಾಣಿಜ್ಯ ತೆರಿಗೆ ಅಧಿಕಾರಿಗಳು (ಮುಖ್ಯ) ಗುಲಬರ್ಗಾ, ವಾಣಿಜ್ಯ ತೆರಿಗೆ ಅಧಿಕಾರಿಗಳು (ಗ್ರಾ) ಗುಲಬರ್ಗಾ ಹಾಗೂ ವಾಣಿಜ್ಯ ತೆರಿಗೆ ಅಧಿಕಾರಿಗಳು ಸೇಡಂ, ಶಹಾಪುರ, ಯಾದಗಿರಿ, ಗುಲಬರ್ಗಾ ವೃತ್ತಗಳು ಅಧೀನ ಕಛೇರಿಗಳಾಗಿವೆ. ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರ ನೆರವಿಗೆ ಮೂರು ಜನ ವಾಣಿಜ್ಯ ತೆರಿಗೆ ಉಪ-ಆಯುಕ್ತರು, ೯ ಜನ ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು, ೯ ಜನ ವಾಣಿಜ್ಯ ತೆರಿಗೆಗಳ ಅಧಿಕಾರಿಗಳು ಹಾಗೂ ಇನ್ನಿತರ ೧೬೨ ಜನ ಸಿಬ್ಬಂದಿ ಇದೆ.

ವ್ಯಾಪಾರಸ್ಥರ ವ್ಯವಹಾರಕ್ಕೆ ಸಂಬಂಧಿಸಿದಂತೆ ತೆರಿಗೆ ವಸೂಲಿ, ಕರ ನಿರ್ಧಾರಣೆ, ಕಾಯ್ದೆ ಕಾನೂನುಗಳ ಬಗ್ಗೆ ತಿಳುವಳಿಕೆ ನೀಡವುದು, ತೆರಿಗೆಗಳ ಸೋರುವಿಕೆಯನ್ನು ತಡೆಗಟ್ಟುವುದು ಸರ್ಕಾರಕ್ಕೆ ರಾಜಸ್ವ ಸಂಗ್ರಹಿಸಿ ಕೊಡುವುದು ಮುಂತಾದ ಕಾರ್ಯಚಟುವಟಿಕೆಗಳನ್ನು ಈ ಕಾರ್ಯಾಲಯ ನಿರ್ವಹಿಸುತ್ತದೆ. ಕರ್ನಾಟಕ ಮಾರಾಟ ತೆರಿಗೆ, ಪ್ರವೇಶ ತೆರಿಗೆ, ವೃತ್ತಿ ತೆರಿಗೆ, ಮನೋರಂಜನ ತೆರಿಗೆ ಹಾಗೂ ವಿಲಾಸ ತೆರಿಗೆಗಳ ಸಂಬಂಧಪಟ್ಟ ಕಾಯ್ದೆಕಾನೂನುಗಳನ್ನು ಈ ಕಛೇರಿ ಅನ್ವಯಗೊಳಿಸುವುದು ದಾವಣಗೆರೆ ವಲಯ ಕಛೇರಿಯ ಅಪರ ತೆರಿಗೆ ಆಯುಕ್ತರು ಈ ಇಲಾಖೆಯ ತತ್‌ಕ್ಷಣದ ಮೇಲಧಿಕಾರಿಗಳಾಗಿರುತ್ತಾರೆ.

## ವಾರ್ತಾ ಮತ್ತು ಪ್ರಚಾರ ಇಲಾಖೆ

ಸರ್ಕಾರದ ವಿವಿಧ ಯೋಜನೆಗಳು ಹಾಗೂ ಕಾರ್ಯಕ್ರಮಗಳು ಬಗ್ಗೆ ಗ್ರಾಮೀಣ ಪ್ರದೇಶದ ಜನರಿಗೆ ವಿವಿಧ ಪ್ರಚಾರ ಮಾಧ್ಯಮಗಳ ಮೂಲಕ ತಿಳುವಳಿಕೆ ನೀಡುವ ಉದ್ದೇಶದಿಂದ ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳ ಕಛೇರಿಯು ಗುಲಬರ್ಗಾದಲ್ಲಿ ೧೯೮೧ರಲ್ಲಿ ಪ್ರಾರಂಭಗೊಂಡಿತು. ಇದಕ್ಕೂ ಪೂರ್ವದಲ್ಲಿ ಅಂದರೆ ೧೯೬೦ರಷ್ಟು ಹಿಂದೆಯೇ ವಿಭಾಗೀಯ ಕಛೇರಿಯ ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಗುಲಬರ್ಗಾ ಇವರ ಆಡಳಿತಕ್ಕೆ ಒಳಪಟ್ಟಿತ್ತು. ೧೯೬೬ರಲ್ಲಿ ಪ್ರತಿ ಜಿಲ್ಲೆಗಳಲ್ಲಿ ಜಿಲ್ಲಾ ಪ್ರಚಾರಾಧಿಕಾರಿಗಳ ಹುದ್ದೆಯ ಸೃಷ್ಟಿಯೊಂದಿಗೆ ಜಿಲ್ಲಾ ಪ್ರಚಾರಾಧಿಕಾರಿಗಳ ಕಛೇರಿ ಸ್ಥಾಪನೆಗೊಂಡಿತು. ನಂತರದಲ್ಲಿ (೧೯೭೪)ಮತ್ತು ಸಹಾಯಕ ನಿರ್ದೇಶಕರು ಹಾಗೂ ಪ್ರಚಾರಾಧಿಕಾರಿಗಳ ಹುದ್ದೆಗಳನ್ನು ಒಂದುಗೂಡಿಸಿ ವಿಭಾಗೀಯ ವಾರ್ತಾ ಮತ್ತು ಪ್ರಚಾರಾಧಿಕಾರಿಗಳ ಹುದ್ದೆಯಾಗಿ ಮಾರ್ಪಡಿಸಲಾಯಿತು. ೧೯೮೧ರಲ್ಲಿ ಇಲಾಖೆ ಪುನರ್ ರಚನೆಗೊಂಡು ವಿಭಾಗೀಯ ಹಾಗೂ ಜಿಲ್ಲಾ ಕಛೇರಿಗಳು ಪ್ರತ್ಯೇಕವಾದವು. ಜಿಲ್ಲಾ ಮಟ್ಟದ ಕಛೇರಿಗೆ ಈಗಿರುವಂತೆ ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳು ಮುಖ್ಯಾಧಿಕಾರಿಗಳಾಗಿ ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುವರು. ವಿಭಾಗೀಯ ಮಟ್ಟದ ಕಾರ್ಯಾಲಯವು ಉಪ-ನಿರ್ದೇಶಕರ ನೇತೃತ್ವದಲ್ಲಿ ಬೀದರ್, ಗುಲಬರ್ಗಾ, ರಾಯಚೂರು ಹಾಗೂ ಬಳ್ಳಾರಿ ಜಿಲ್ಲೆಗಳ ಆಡಳಿತ ವ್ಯಾಪ್ತಿಯನ್ನು ಹೊಂದಿ ಕಾರ್ಯನಿರ್ವಹಿಸುತ್ತಿವೆ.

ಸಂಗೀತ, ನಾಟಕ, ವಿಚಾರ ಗೋಷ್ಠಿ, ಗೀಗೀಪದ, ಲಾವಣಿ, ಹರಿಕಥೆ, ವಸ್ತು ಪ್ರದರ್ಶನ, ಚಲನಚಿತ್ರ ಪ್ರದರ್ಶನ, ಸಾರ್ವಜನಿಕ ವಾಚನಾಲಯ ನಡೆಸುವಿಕೆ, ಸರ್ಕಾರದ ಕಾರ್ಯಕ್ರಮಗಳನ್ನು ದೂರದರ್ಶನದಲ್ಲಿ ಅಳವಡಿಸುವಿಕೆ. ಸಚಿವ ಹಾಗೂ ಮುಖ್ಯಸ್ಥರ ಕಾರ್ಯಕ್ರಮ ವರದಿ, ಪತ್ರಿಕಾಗೋಷ್ಠಿ ಏರ್ಪಡಿಸುವುದು, ಸರ್ಕಾರಿ ಕಛೇರಿಗಳ ಸುದ್ದಿಯನ್ನು ಪತ್ರಿಕೆಗಳಿಗೆ ಕಳಿಸುವುದು ಹಾಗೂ ವಾರ್ತಾ ವಿಶೇಷಗಳನ್ನು ಬಿಡುಗಡೆ ಮಾಡುವುದು ಮುಂತಾದವುಗಳ ಈ ಕಾರ್ಯಾಲಯದ ಚಟುವಟಿಕೆಗಳಾಗಿವೆ. ಇದೂ ಅಲ್ಲದೆ ಸಾರ್ವಜನಿಕ ಕುಂದುಕೊರತೆಗಳನ್ನು ಪರಿಶೀಲಿಸಿ ಸಂಬಂಧಪಟ್ಟ ಇಲಾಖೆಗಳ ಗಮನಕ್ಕೆ ತರುವುದು, ಪತ್ರಕರ್ತರಿಗೆ ಮಾಶಾಸನ, ವೈದ್ಯಕೀಯ ಹಾಗೂ ಪ್ರವಾಸ ಸೌಲಭ್ಯ ಒದಗಿಸುವುದು ಹಾಗೂ ಸರ್ಕಾರ ಮತ್ತು ಸಾರ್ವಜನಿಕರ ನಡುವೆ ಮಾರ್ಗದರ್ಶಿಯಾಗಿ ಕಾರ್ಯ ನಿರ್ವಹಿಸುವ ಜವಾಬ್ದಾರಿಯನ್ನು ಈ ಕಾರ್ಯಾಲಯ ಹೊಂದಿದೆ.

## ಸಣ್ಣ ಉಳಿತಾಯ ಇಲಾಖೆ

ಸಾರ್ವಜನಿಕರಲ್ಲಿ ಉಳಿತಾಯ ಮನೋಭಾವ ಮೂಡಿಸಿ ರಾಜ್ಯದ ಅಭಿವೃದ್ಧಿ ಕಾರ್ಯಗಳಿಗೆ ಅವಶ್ಯಕವಾಗಿರುವ ಸಂಪನ್ಮೂಲಗಳನ್ನು ಸಂಗ್ರಹಿಸುವ ಉದ್ದೇಶದಿಂದ ಸಹಾಯಕ ನಿರ್ದೇಶಕರ ಕಾರ್ಯಾಲಯವು ರಾಜ್ಯ ಪುನರ್ ಘಟನೆಯ ನಂತರದಲ್ಲಿ ಗುಲಬರ್ಗಾದಲ್ಲಿ ಕಾರ್ಯಾರಂಭ ಮೂಡಿದೆ, ಜಿಲ್ಲಾ ಅಧಿಕಾರ ವ್ಯಾಪ್ತಿ ಹೊಂದಿರುವ ಸಹಾಯಕ ನಿರ್ದೇಶಕರು (ಸಣ್ಣ ಉಳಿತಾಯ) ಕಛೇರಿಯ ಮುಖ್ಯಾಧಿಕಾರಿಗಳಾಗಿದ್ದು ಅವರ ನೆರುವಿಗೆ ಒಬ್ಬರು ಅಭಿವೃದ್ಧಿ ಅಧಿಕಾರಿ ಹಾಗೂ ಏಳು ಜನ ಸಹಾಯಕ ಅಭಿವೃದ್ಧಿ ಅಧಿಕಾರಿಗಳು ಜೇವರ್ಗಿ, ಆಳಂದ, ಚಿಂಚೋಳಿ, ಅಫ್‌ಜಲಪುರ, ಸುರಪುರ, ಸೇಡಂ ಶಹಾಪುರಗಳಿಗೊಬ್ಬರಂತೆ ಹಾಗೂ ಇನ್ನಿತರ ಸಿಬ್ಬಂದಿ ಇದೆ. ಸರ್ಕಾರ ನಿಗದಿಪಡಿಸಿದ ಜಿಲ್ಲಾ ವಾರ್ಷಿಕ ಗುರಿ ಸಾಧನೆಗೆ ಸರ್ವ ಪ್ರಯತ್ನ ಮಾಡುವುದು, ಜನರಲ್ಲಿ ಸಣ್ಣ ಉಳಿತಾಯದ ಬಗ್ಗೆ ಆಸಕ್ತಿ ವಹಿಸುವಂತೆ ಅವರನ್ನು ಪ್ರೇರೇಪಿಸುವುದು, ಪ್ರೋತ್ಸಾಹ ಹಣ ಜಾರಿಗೊಳಿಸುವುದು, ವಿದ್ಯಾಸಂಸ್ಥೆಗಳಿಗೆ, ಮುಜರಾಯಿ ಸಂಸ್ಥೆಗಳಿಗೆ, ಯುವಕ ಯುವತಿಯರ ಸಂಘಗಳಿಗೆ

ಸಣ್ಣ ಉಳಿತಾಯದ ಅಧಿಕೃತ ಏಜೆನ್ಸಿ ಕೊಟ್ಟು ಪ್ರೋತ್ಸಾಹಿಸುವುದು ಮುಂತಾದ ಕಾರ್ಯಚಟುವಟಿಕೆಗಳನ್ನು ಈ ಕಛೇರಿ ನಡೆಸುತ್ತಿರುವುದು.

ಸಣ್ಣ ಉಳಿತಾಯ ಹಾಗೂ ರಾಜ್ಯ ಲಾಟರಿ ಇಲಾಖೆಗೆ ಅನ್ವಯಿಸುವಂತೆ ೧೯೯೦ರಲ್ಲಿ ಜಾರಿಗೊಳಿಸಿದ ಕೈಪಿಡಿ ಹಾಗೂ ಕೇಂದ್ರ ಸರ್ಕಾರವು ಅಂಚೆ ಕಛೇರಿಗಳ ಮೂಲಕ ಕಾಲಕಾಲಕ್ಕೆ ಜಾರಿಗೊಳಿಸುತ್ತಿರುವ ನಿಯಮಗಳನ್ನು ಈ ಕಛೇರಿ ಅನ್ವಯಗೊಳಿಸುತ್ತದೆ. ಉಪ-ನಿರ್ದೇಶಕರು (ವಿಭಾಗೀಯ) ಸಣ್ಣ ಉಳಿತಾಯ ಗುಲಬರ್ಗಾ ಇವರು ತತ್‌ಕ್ಷಣದ ಮೇಲಾಧಿಕಾರಿಗಳಾಗಿರುತ್ತಾರೆ.

**ಸಮಾಜ ಕಲ್ಯಾಣ ಇಲಾಖೆ**

ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳ ಕಾರ್ಯಾಲಯವು ೧೯೪೮ರಷ್ಟು ಹಿಂದೆಯೇ ಗುಲಬರ್ಗಾದಲ್ಲಿ ಪ್ರಾರಂಭಗೊಂಡಿತ್ತು. ಪರಿಶಿಷ್ಟ ಜಾತಿ \ ಪಂಗಡ ವಿದ್ಯಾರ್ಥಿಗಳಿಗೆ ಶಿಷ್ಯವೇತನ, ವಸತಿ ನಿಲಯದ ಅವಕಾಶ ಹಾಗೂ ಅವರ ಸಾಮಾಜಿಕ, ಆರ್ಥಿಕ ಸಮಸ್ಯೆಗಳಿಗೆ ಪರಿಹಾರ ಮತ್ತು ಅವರ ಅಭಿವೃದ್ಧಿಗೆ ಸರ್ಕಾರ ಹಮ್ಮಿಕ್ಕೊಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಉದ್ದೇಶ ಈ ಕಾರ್ಯಾಲಯದ್ದಾಗಿದೆ. ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು ಕಾರ್ಯಾಲಯದ ಮುಖ್ಯಾಧಿಕಾರಿಯಾಗಿದ್ದು ಅವರು ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿರುವರು.

ಹೊಲಿಗೆ ಯಂತ್ರಗಳ ಸರಬರಾಜು, ಕಾನೂನು ಪದವೀಧರರಿಗೆ ಸಹಾಯಧನ, ಪದವಿಪೂರ್ವ ಹಾಗೂ ಡಿಗ್ರಿ ಪದವಿ ಪರೀಕ್ಷೆಗಳಲ್ಲಿ ಪ್ರಥಮ ಸಲ ಪ್ರಥಮ ಶ್ರೇಣಿಯಲ್ಲಿ ಪಾಸಾದ ಪರಿಶಿಷ್ಟ ಜಾತಿ / ಪಂಗಡ ಅಭ್ಯರ್ಥಿಗಳಿಗೆ ನಗದು ಬಹುಮಾನ ನೀಡಿಕೆ, ಸ್ವಯಂ ಉದ್ಯೋಗ ಬಯಸಿದವರಿಗೆ ಆಟೋ ರಿಕ್ಷಾ ಮತ್ತು ಲಘು ವಾಹನ ತರಬೇತಿ, ಶಿಷ್ಯವೇತನ ಹಾಗೂ ವಸತಿ ನಿಲಯಗಳಲ್ಲಿ ಅವಕಾಶ ದೊರಕಿಸಿ ಕೊಡುವುದು ಮುಂತಾದ ಕಾರ್ಯಚಟುವಟಿಕೆಗಳನ್ನು ಈ ಕಛೇರಿ ಹಮ್ಮಿಕ್ಕೊಂಡು ನಡೆಸುತ್ತಿದೆ. ಈ ಕಛೇರಿಯ ಅಧೀನದಲ್ಲಿ ತಾಲೂಕು ಮಟ್ಟದಲ್ಲಿ ತಾಲೂಕು ಸಮಾಜ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯಗಳು ಗುಲಬರ್ಗಾ, ಆಳಂದ, ಮತ್ತು ಚಿತ್ತಾಪುರಗಳಲ್ಲಿ ಪ್ರತ್ಯೇಕವಾಗಿದ್ದು ಉಳಿದ ತಾಲೂಕುಗಳಲ್ಲಿ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿವೆ.

**ಸಾರಿಗೆ ಇಲಾಖೆ**

ಮೋಟಾರು ವಾಹನಗಳ ಕಾಯ್ದೆ ಮತ್ತು ನಿಯಮಗಳನ್ನು ಜಾರಿಗೊಳಿಸುವ ಉದ್ದೇಶದಿಂದ ಪ್ರಾದೇಶಿಕ ಸಾರಿಗೆ ಅಧಿಕಾರಿಗಳವರ ಕಛೇರಿಯು ೧೯೫೭ ರಿಂದ ಜಿಲ್ಲಾ ಕೇಂದ್ರದಲ್ಲೂ ಕಾರ್ಯಾರಂಭ ಮಾಡಿದೆ. ರಾಜ್ಯ ಪುನರ್ ಘಟನೆ ಮೊದಲು ಈ ಕಛೇರಿಯು ಪೋಲೀಸ್ ಇಲಾಖೆಯ ಒಂದು ಶಾಖೆಯಾಗಿ ಕಾರ್ಯ ನಿರ್ವಹಿಸುತ್ತಿತ್ತು. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುವರು ೧೯೮೫ರಿಂದ ಜಿಲ್ಲೆಯ ಏಳು ತಾಲೂಕುಗಳಾದ ಆಳಂದ, ಅಫಜಲ್‌ಪುರ, ಚಿಂಚೋಳಿ, ಚಿತ್ತಾಪುರ, ಜೇವರ್ಗಿ, ಗುಲಬರ್ಗಾ ಹಾಗೂ ಸೇಡಂ ತಾಲೂಕುಗಳ ಅಧಿಕಾರ ವ್ಯಾಪ್ತಿ ಹೊಂದಿರುವುದು ಇನ್ನುಳಿದ ತಾಲೂಕುಗಳಾದ ಯಾದಗಿರಿ, ಶಹಾಪುರ ಮತ್ತು ಸುರಪುರ ತಾಲೂಕುಗಳು ಯಾದಗಿರಿಯ ಸಹಾಯಕ ಪ್ರಾದೇಶಿಕ ಅಧಿಕಾರಿಗಳ ಆಡಳಿತಕ್ಕೆ ಒಳಪಡುತ್ತವೆ. ಮೋಟಾರು ವಾಹನ ನೊಂದಣಿ, ಸಾರಿಗೆ ವಾಹನಗಳಿಗೆ ಪರವಾನಿಗೆ ನೀಡಿಕೆ, ಅರ್ಹತಾ ಪತ್ರ ನೀಡಿಕೆ, ಚಾಲನೆ ಅನುಜ್ಞಾಪತ್ರ ನೀಡಿಕೆ, ನಿರ್ವಾಹಕ ಅನುಜ್ಞಾಪತ್ರ ನೀಡಿಕೆ, ಕಾಯ್ದೆ ಉಲ್ಲಂಘನೆ ಪ್ರಕರಣಗಳ ತಪಾಸಣೆ, ಸಂಚಾರ ನಿಯಂತ್ರಣಕ್ಕೆ ಸಂಬಂಧಿಸಿದಂತೆ ತೆಗೆದುಕೊಂಡ ತೀರ್ಮಾನಗಳ ಜಾರಿ, ರಸ್ತೆ ಸುರಕ್ಷತೆ ಬಗ್ಗೆ ಕೈಗೊಳ್ಳಲಾದ ನಿರ್ಣಯಗಳು ಜಾರಿ ಮುಂತಾದ ಕಾರ್ಯ ಚಟುವಟಿಕೆಗಳನ್ನು ಈ ಕಾರ್ಯಾಲಯ ನಡೆಸಿಕೊಂಡು ಬರುತ್ತಿದೆ.

ಮೋಟಾರು ವಾಹನಗಳ ಕಾಯ್ದೆ ೧೯೮೮, ಮೋಟಾರು ವಾಹನ ನಿಯಮಗಳು ೧೯೮೯, ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಕಾಯ್ದೆ ೧೯೫೭ ಹಾಗೂ ನಿಯಮಗಳು ನೀಡುವ ಅಧಿನಿಮಯಗಳನ್ನು ಈ ಕಾರ್ಯಾಲಯ ಜಾರಿಗೊಳಿಸುತ್ತದೆ. ವಾಹನ ಮಾಲಿನ್ಯವನ್ನು ತಡೆಗಟ್ಟುವ ಹಾಗೂ ಕಲಿಕೆ ಲೈಸನ್ಸಗಳನ್ನು ನೀಡುವ ಅಧಿನಿಯಮಗಳನ್ನು ಈ ಕಾರ್ಯಾಲಯ ಜಾರಿಗೊಳಿಸುತ್ತದೆ.

**ಸಾರ್ವಜನಿಕ ಗ್ರಂಥಾಲಯ ಇಲಾಖೆ**

ಜಿಲ್ಲಾ ಕೇಂದ್ರ ಗ್ರಂಥಾಲಯವು ೧೯೭೫ ರಲ್ಲಿ ಗುಲಬರ್ಗಾದಲ್ಲಿ ಕರ್ನಾಟಕ ಗ್ರಂಥಾಲಯದ ಅಧಿನಿಯಮದ ರೀತ್ಯ ಆರಂಭಗೊಂಡಿತು. ಈ ಗ್ರಂಥಾಲಯ ಕಛೇರಿಯು ಮುಖ್ಯ ಗ್ರಂಥಾಲಯಾಧಿಕಾರಿಗಳ ನೇತೃತ್ವದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಜಿಲ್ಲಾ ಮಟ್ಟದ ಅಧಿಕಾರ ವ್ಯಾಪ್ತಿಯನ್ನು ಹೊಂದಿದೆ. ಓದುಗರಿಗೆ ಗ್ರಂಥಗಳನ್ನು, ನಿಯತಕಾಲಿಕಗಳನ್ನು ಮತ್ತು ದಿನಪತ್ರಿಕೆಗಳನ್ನು ಒದಗಿಸುವುದು, ಗ್ರಾಮೀಣ ಪ್ರದೇಶಗಳಲ್ಲಿ ಗ್ರಂಥಾಲಯ ಸೇವೆ ಒದಗಿಸುವುದು, ರಾಷ್ಟ್ರೀಯ ಗ್ರಂಥಾಲಯ ಸಪ್ತಾಹಗಳನ್ನು ಆಚರಿಸುವುದು ಮುಂತಾದ ಮುಖ್ಯ ಉದ್ದೇಶಗಳನ್ನು ಈ ಕಾರ್ಯಾಲಯ ಹೊಂದಿದೆ. ಜಿಲ್ಲೆಯಲ್ಲಿ ೧೨೦ ಶಾಖಾ ಗ್ರಂಥಾಲಯಗಳು ಇದ್ದು ಇವುಗಳಿಗೆ ಗ್ರಂಥಗಳನ್ನು ವಿತರಣೆ ಮಾಡುವುದು ಹಾಗೂ ಆಡಳಿತ ನಿರ್ವಹಣೆ ಜಿಲ್ಲಾ ಗ್ರಂಥಾಲಯದ ಕೆಲಸ. ಈಗಾಗಲೇ ೬೪ ಗ್ರಾಮ ಪಂಚಾಯತ್ ಗ್ರಂಥಾಲಯಗಳು ಮತ್ತು ೧೮ ಗ್ರಾಮೀಣ ಗ್ರಂಥಾಲಯಗಳು ಸೇವೆ ಸಲ್ಲಿಸುತ್ತಿದ್ದು ಗ್ರಾಮಗಳಿಗೂ ಹೋಗಲು ಸಂಚಾರಿ ಗ್ರಂಥಾಲಯ ಸೌಲಭ್ಯ ಒದಗಿಸುವ ಯೋಜನೆ ಕಾರ್ಯ ರೂಪುಗೊಳ್ಳಬೇಕಾಗಿದೆ. ಗುಲಬರ್ಗಾ ನಗರಕ್ಕೆ ಪ್ರತ್ಯೇಕವಾದ ನಗರ ಕೇಂದ್ರ ಗ್ರಂಥಾಲಯದ ಕಛೇರಿ ಇದ್ದು (೧೯೮೦) ಅದರ ಆಡಳಿತ ವ್ಯಾಪ್ತಿಯಲ್ಲಿ ೧೨ ಶಾಖಾ ಗ್ರಂಥಾಲಯಗಳು ಮತ್ತು ನಗರ ಸಂಚಾರಿ ಗ್ರಂಥಾಲಯಗಳ ವ್ಯವಸ್ಥೆ ಇರುವುದು. ನಿರ್ದೇಶಕರು ಸಾರ್ವಜನಿಕ ಗ್ರಂಥಾಲಯ ಇಲಾಖೆ ಬೆಂಗಳೂರು ಇವರು ತತ್‌ಕ್ಷಣದ ಮೇಲಾಧಿಕಾರಿಗಳಾಗಿರುತ್ತಾರೆ.

**ಸಾರ್ವಜನಿಕ ಶಿಕ್ಷಣ ಇಲಾಖೆ**

ಶಿಕ್ಷಣದ ಅಭಿವೃದ್ಧಿಕಾರ್ಯಗಳು, ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣದ ಸಮರ್ಪಕ ಆಡಳಿತ ನಿರ್ವಹಣೆಯ ಉದ್ದೇಶದಿಂದ ಉಪ-ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖಾ ಕಾರ್ಯಾಲಯವು ೧೯೭೦-೭೧ರಲ್ಲಿ ಗುಲಬರ್ಗಾದಲ್ಲಿ ಪ್ರಾರಂಭಗೊಂಡಿತು. ೧೯೭೦ಕ್ಕೂ ಮೊದಲು ಜಿಲ್ಲೆಯ ಶಿಕ್ಷಣ ಆಡಳಿತವು ಉಪವಿದ್ಯಾಧಿಕಾರಿಗಳಿಗೆ (ಡಿ.ಇ.ಓ) ನೇತೃತ್ವದಲ್ಲಿ ಇತ್ತು.

ಉಪನಿರ್ದೇಶಕರು ಸಂಪೂರ್ಣ ಜಿಲ್ಲೆಯ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಜವಾಬ್ದಾರಿ ಹೊಂದಿರುವರು. ಉಪನಿರ್ದೇಶಕರ ನೆರವಿಗೆ ಇಬ್ಬರು ಶಿಕ್ಷಣಾಧಿಕಾರಿಗಳು, ಒಬ್ಬರು ಪತ್ರಾಂಕಿತ ಸಹಾಯಕರು, ಒಬ್ಬರು ಜಿಲ್ಲಾ ಶಾರೀರಿಕ ಶಿಕ್ಷಣ ಅಧೀಕ್ಷಕರು, ಐವರು ವಿಷಯ ಪರಿವೀಕ್ಷಕರು ಮುಂತಾದ ವಿವಿಧ ಹಂತಗಳ ನೌಕರರು ಸಹಾಯಕರಾಗಿರುವರು ಶಿಕ್ಷಕರ ಅಭಿವೃದ್ಧಿ, ಶಿಕ್ಷಕರ ರಜೆ, ವರ್ಗಾವಣೆ, ವೇತನ, ದೂರುಗಳ ಪರಿಶೀಲನೆ ಮುಂತಾದ ಕಾರ್ಯ ಜವಾಬ್ದಾರಿಗಳನ್ನು ಈ ಕಾರ್ಯಾಲಯ ನಿರ್ವಹಿಸುತ್ತಿದೆ. ಮಧ್ಯಾಹ್ನದ ಉಪಹಾರಯೋಜನೆ, ಕಪ್ಪುಹಲಗೆ ಕಾರ್ಯಕ್ರಮ, ಏರಿಯಾ ಇನ್‌ಸೆಂಟಿವಸ್ ಶಾಲಾ ಪೀಠೋಪಕರಣಗಳು ಮುಂತಾದ ಯೋಜನೆಗಳನ್ನು ಈ ಕಾರ್ಯಾಲಯ ಅನುಷ್ಠಾನಗೊಳಿಸುತ್ತಿದೆ.

ತಾಲೂಕು ಮಟ್ಟದಲ್ಲಿ ಕ್ಷೇತ್ರ (ಬ್ಲಾಕ್) ಶಿಕ್ಷಣ ಅಭಿವೃದ್ಧಿ ಮತ್ತು ಆಡಳಿತದ ಕೆಲಸಗಳನ್ನು ಶಿಕ್ಷಣಾಧಿಕಾರಿಗಳು ಇದ್ದು ಅವರ ನೆರವಿಗೆ ೧೦ ಜನ ಸಹಾಯಕ ಶಿಕ್ಷಣಾಧಿಕಾರಿಗಳು ಮತ್ತು ಇತರ ಸಿಬ್ಬಂದಿ ವರ್ಗದವರೂ ಇರುವರು.

ಗುಲಬರ್ಗಾವು ವಿಭಾಗೀಯ ಜಂಟಿನಿರ್ದೇಶಕರ ಕಾರ್ಯಾಲಯವು ೧೯೭೦ರಿಂದ ಗುಲಬರ್ಗಾದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಬೀದರ, ಗುಲಬರ್ಗಾ, ರಾಯಚೂರು ಹಾಗೂ ಬಳ್ಳಾರಿ ಜಿಲ್ಲೆಗಳ ಆಡಳಿತಾತ್ಮಕ ಹಾಗೂ ಮೇಲ್ವಿಚಾರಣಾ ಜವಾಬ್ದಾರಿಯನ್ನು ಜಂಟಿನಿರ್ದೇಶಕರು ಹೊಂದಿದ್ದಾರೆ.

**ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ**

ಯುದ್ಧದಲ್ಲಿ ಮಡಿದ ಯೋಧರ ಕುಟುಂಬ ಹಾಗೂ ಮಾಜಿ ಸೈನಿಕರ ಯೋಗಕ್ಷೇಮದ ಉದ್ದೇಶದಿಂದ ಉಪನಿರ್ದೇಶಕರು ಸೈನಿಕ ಕಲ್ಯಾಣ ಹಾಗೂ ಪುನರ್ವಸತಿ ಇಲಾಖಾ ಕಚೇರಿಯು ಗುಲಬರ್ಗಾದಲ್ಲಿ ೧೯೭೨ರಲ್ಲಿ ಪ್ರಾರಂಭಗೊಂಡಿತು. ಉಪನಿರ್ದೇಶಕರು ಕಚೇರಿ ಮುಖ್ಯಾಧಿಕಾರಿಗಳಾಗಿದ್ದು ಮಾಜಿ ಸೈನಿಕರಿಗಾಗಿ ಉದ್ಯೋಗ ದೊರಕಿಸಿಕೊಡುವುದು, ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆಯಿಂದ ನಿಧಿ ಸಂಗ್ರಹಿಸುವುದು, ಕೆಲವು ಕೇಂದ್ರ ಸರ್ಕಾರದ

ಸ್ವಯಂ ಉದ್ಯೋಗ ಯೋಜನೆಗಳನ್ನು ಜಾರಿತರುವುದು, ಮಾಜಿ ಸೈನಿಕ ಮಕ್ಕಳಿಗೆ ಶಿಷ್ಯವೇತನ ಅರ್ಜಿ ಶಿಫಾರಸ್ ಮಾಡುವುದು, ನಿರ್ಗತಿಕ ಮಾಜಿ ಸೈನಿಕರಿಗೆ ಧನಸಹಾಯ ಮಂಜೂರಿ, ಮಾಜಿ ಸೈನಿಕ ಮಕ್ಕಳಿಗೆ ವೃತ್ತಿಪರ ಶಿಕ್ಷಣಕ್ಕಾಗಿ ಅವಲಂಬಿತ ಪ್ರಮಾಣ ಪತ್ರ ನೀಡುವುದು. ಮಾಜಿ ಸೈನಿಕರು ಮತ್ತು ಅವರ ವಿಧವೆಯವರಿಗೆ ಗುರುತಿನ ಚೀಟಿ ಕೊಡುವುದು, ಕುಟುಂಬದ ಪಿಂಚಣಿಯ ಕುರಿತಾಗಿ ಪತ್ರ ವ್ಯವಹಾರ ನಡೆಸುವುದು, ಯುದ್ಧದಲ್ಲಿ ಮಡಿದ ಯೋಧರ ವಿಧವೆಯವರಿಗೆ ಉಚಿತ ನಿವೇಶನ, ಮನೆಕಟ್ಟಿಸಿಕೊಡುವುದು, ಸಾಗುವಳಿ ಜಮೀನು ಇಲ್ಲವೆ ಹಣದ ಸಹಾಯ ಒದಗಿಸುವುದು ಅವಲಂಬಿತರಿಗೆ ಉದ್ಯೋಗ ನೀಡಿಕೆ ಮುಂತಾದ ಕಾರ್ಯ ಚಟುವಟಿಕೆಗಳನ್ನು ಈ ಕಾರ್ಯಾಲಯ ನಡೆಸಿಕೊಂಡು ಬರುತ್ತದೆ. ನಿರ್ದೇಶಕರು, ಸೈನಿಕ ಕಲ್ಯಾಣ ಪುನರ್ವಸತಿ ಇಲಾಖೆ ಬೆಂಗಳೂರು ಇವರು ತತ್‌ಕ್ಷಣದ ಮೇಲಾಧಿಕಾರಿಗಳಾಗಿರುತ್ತಾರೆ.

**ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಇಲಾಖೆ**

ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಹಿಂದುಳಿದ ಸಮುದಾಯದ ಕಲ್ಯಾಣದ ಉದ್ದೇಶದಿಂದ ಜಿಲ್ಲಾ ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಅಧಿಕಾರಿಗಳ ಕಛೇರಿಯು ೧೯೭೭ರಲ್ಲಿ ಗುಲಬರ್ಗಾದಲ್ಲಿ ಪ್ರಾರಂಭಗೊಂಡಿದೆ. ಹಿಂದುಳಿದ ಹಾಗೂ ಅಲ್ಪಸಂಖ್ಯಾತ ವಿದ್ಯಾರ್ಥಿಗಳ ಅಭಿವೃದ್ಧಿಗಾಗಿ ವಸತಿ ನಿಲಯಗಳನ್ನು ಸ್ಥಾಪಿಸುವುದು, ಹಿಂದುಳಿದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡುವುದು ಕಚೇರಿಯ ಮುಖ್ಯ ಕಾರ್ಯ ಚಟುವಟಿಕೆಗಳಾಗಿವೆ. ಇದೂ ಅಲ್ಲದೇ ಶೈಕ್ಷಣಿಕ ಕಾರ್ಯಕ್ರಮಗಳ ಅಡಿಯಲ್ಲಿ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ಬಾಲಕ, ಬಾಲಕಿಯರಿಗೆ ವಿದ್ಯಾರ್ಥಿ ನಿಲಯಗಳು ಮತ್ತು ಮೆಟ್ರಿಕ್ ಪೂರ್ವ ಹಾಗೂ ನಂತರದ ವಿದ್ಯಾರ್ಥಿಗಳಿಗೆ ಶಿಕ್ಷಣ ಶುಲ್ಕ ವಿನಾಯಿತಿ, ಅಶ್ರಮ ಶಾಲೆಗಳ ಸ್ಥಾಪನೆ, ಮಹಿಳಾ ಕಲ್ಯಾಣ ಕೇಂದ್ರಗಳು, ಹೊಲಿಗೆ ತರಬೇತಿ ಕೇಂದ್ರಗಳು, ಕಾನೂನು ಪದವೀಧರಿಗೆ ತರಬೇತಿ, ಬೆರಳಚ್ಚು ಹಾಗೂ ಶೀಘ್ರಲಿಪಿ ತರಬೇತಿ, ಆರ್ಥಿಕ ಕಾರ್ಯಕ್ರಮದಡಿ ಹಿಂದುಳಿದ ವರ್ಗಗಳ ಅಭಿವೃದ್ಧಿ, ಚೈತನ್ಯ ಸಾಲಯೋಜನೆ ಸ್ವಯಂ ಉದ್ಯೋಗ ಯೋಜನೆ, ಸ್ವಾವಲಂಬನೆ ಸಾಲಯೋಜನೆ, ವಾಹನಚಾಲಕರ ತರಬೇತಿ ಮತ್ತು ಫೋರಮನ್ ತರಬೇತಿಗಳನ್ನು ನಡೆಸಲಾಗುತ್ತದೆ. ನಿರ್ದೇಶಕರು ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರುಗಳ ಇಲಾಖೆ ಬೆಂಗಳೂರು ಇವರು ತತ್‌ಕ್ಷಣದ ಮೇಲಾಧಿಕಾರಿಗಳಾಗಿರುತ್ತಾರೆ.

**ಒಣ ಭೂಮಿ ಅಭಿವೃದ್ಧಿ ಮಂಡಳಿ**

ಒಣ ಭೂಮಿ ಅಭಿವೃದ್ಧಿ ಮಂಡಳಿಯು ೧೯೮೮ರಲ್ಲಿ ಗುಲಬರ್ಗಾದಲ್ಲಿ ಪ್ರಾರಂಭಗೊಂಡಿತು. ಆಡಳಿತಾಧಿಕಾರಿಯವರು ಕಾರ್ಯಾಲಯದ ಮುಖ್ಯಸ್ಥರಾಗಿರುತ್ತಾರೆ. ವಿಭಾಗ ಮಟ್ಟದ ಈ ಕಾರ್ಯಾಲಯವು ನಾಲ್ಕು ಜಿಲ್ಲೆಗಳ ಜಲಾನಯನ ಪ್ರದೇಶಗಳಾದ ಮೊಡ್ಡಹಳ್ಳಿ (ಹುಮ್ನಾಬಾದ್) ಮುಚಕಲ್ಲು (ಗುಲಬರ್ಗಾ ಜಿಲ್ಲೆ) ಹಿರೇಹಳ್ಳ (ಕುಷ್ಠಗಿ, ರಾಯಚೂರು ಜಿಲ್ಲೆ) ಮತ್ತು ಸಣ್ಣ ಬೊಮ್ಮರ ಹಳ್ಳಿ (ಕೊಟ್ಟೂರು, ಬಳ್ಳಾರಿ ಜಿಲ್ಲೆ) ಈ ನಾಲ್ಕು ಯೋಜನಾ ನಿರ್ದೇಶಕರ ಕಾರ್ಯಾಲಯಗಳು ಈ ಕಛೇರಿಯ ಅಧಿಕಾರ ವ್ಯಾಪ್ತಿಗೆ ಒಳಪಡುತ್ತವೆ. ವಿಭಾಗಾಧಿಕಾರಿಗಳು ಗುಲಬರ್ಗಾ ಇವರು ಖುಷ್ಕಿ ಭೂ ಅಭಿವೃದ್ಧಿ ಮಂಡಳಿಯ ಆಡಳಿತಾಧಿಕಾರಿಯಾಗಿದ್ದು ಆಡಳಿತಾತ್ಮಕ ವಾರ್ಷಿಕ ಕ್ರಿಯಾ ಯೋಜನೆಗಳ ಮಂಜೂರಾತಿ ಹಾಗೂ ಜಲಾಯನಯನ ಪ್ರದೇಶಗಳು ಕೈಗೊಂಡ ಅಭಿವೃದ್ಧಿ ಕಾರ್ಯಕ್ರಮಗಳ ಸಮಗ್ರ ಪರಿಶೀಲನೆ ಜವಾಬ್ದಾರಿ ಹೊಂದಿರುವರು. ಸಾಮರ್ಥ್ಯಕ್ಕನುಗುಣವಾಗಿ ಭೂಮಿಯ ಉಪಯೋಗ, ಮಳೆಗಾಲದಲ್ಲಿ ಭೂಮಿಯ ಮೇಲೆ ಸಸ್ಯದ ಹೊದಿಕೆ ನಿರ್ಮಿಸುವುದು, ಮಳೆಯ ನೀರನ್ನು ಸಾಧ್ಯವಾದಷ್ಟು ಮಟ್ಟಿಗೆ ಬಿದ್ದ ಭಾಗದಲ್ಲಿಯೇ ತಡೆ ಹಿಡಿಯುವುದು, ಹೆಚ್ಚಿನ ನೀರನ್ನು ಕೋಡಿಯ ಮುಖಾಂತರ ನೀರು ಸಂಗ್ರಹಣಾ ಸ್ಥಳಕ್ಕೆ ಒಯ್ಯುವುದು, ಹಾಗೂ ಬೆಳೆಗಳ ಬದಲಾವಣೆ ಮೂಲಕ ಅತೀಚಿಕ್ಕ ಹಿಡುವಳಿ ಭೂಮಿಯ ಉಪಯೋಗ, ತಾಂತ್ರಿಕ ಸಲಹೆ, ಮಂಜೂರಾತಿ, ಮೇಲ್ವಿಚಾರಣೆ ಮುಂತಾದ ಕಾರ್ಯ ಜವಾಬ್ದಾರಿಗಳು ಮಂಡಳಿಯದ್ದಾಗಿವೆ. ಜವಾಹರ ರೋಜಗಾರ್ ಯೋಜನೆ, ಬರಗಾಲ ಪೀಡಿತ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮ, ಉದ್ಯೋಗ ಭರವಸೆ ಯೋಜನೆ, ದಶಲಕ್ಷ ಬಾವಿ ಯೋಜನೆ ಮುಂತಾದ ಯೋಜನೆಗಳನ್ನು ಕಾರ್ಯಗತಗೊಳಿಸುತ್ತದೆ.

**ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ**

ಬಡ ನೇಕಾರರಿಗೆ ನಿರಂತರ ಉದ್ಯೋಗ ಕಲ್ಪಿಸಿಕೊಡುವ ಹಾಗೂ ಕೈಮಗ್ಗ ಕೈಗಾರಿಕೆಗಳನ್ನು ಮುಂದುವರಿಸಿಕೊಂಡು ಹೋಗುವ ಉತ್ತೇಜನ ನೀಡುವ ಉದ್ದೇಶವನ್ನು ಹೊಂದಿದ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಘಟಕವಾದ ತೀವ್ರ ಕೈಮಗ್ಗ ಅಭಿವೃದ್ಧಿ ಯೋಜನೆಯ ಕಾರ್ಯಾಲಯವು ಗುಲಬರ್ಗಾದಲ್ಲಿ ೧೯೮೦ರಲ್ಲಿ ಕಾರ್ಯಾರಂಭ ಮಾಡಿದೆ. ಯೋಜನಾ ಹಾಗೂ ಗುಣ ನಿಯಂತ್ರಣಾ ಆಡಳಿತಾಧಿಕಾರಿಗಳು ಘಟಕದ ಮುಖ್ಯಾಧಿಕಾರಿಗಳಾಗಿದ್ದು ಗುಲಬರ್ಗಾ ಜಿಲ್ಲಾ, ಆಡಳಿತ ವ್ಯಾಪ್ತಿ ಹೊಂದಿದ್ದಾರೆ. ದೇವದಾಸಿಯರಿಗೆ ಕೈಮಗ್ಗ ತರಬೇತಿ, ಗ್ರಾಮೀಣ ಮಹಿಳೆಯರ ತರಬೇತಿ, ಆಶಾದೀಪ ಯೋಜನೆಯಡಿ ನೇಕಾರರಿಗೆ ವಿದ್ಯುತ್ ಸಂಪರ್ಕ ಸೌಲಭ್ಯ ನೀಡುವುದು, ವಸತಿ ಮತ್ತು ಕಾರ್ಯಾಗಾರ ಅವಶ್ಯವಿರುವವರಿಗೆ ಸೌಲಭ್ಯ ಒದಗಿಸಿಕೊಡುವಂತಹ ವಿವಿಧ ಯೋಜನೆಗಳನ್ನು ಈ ಕಾರ್ಯಾಲಯ ಅನುಷ್ಠಾನ ಗೊಳಿಸುತ್ತಿದೆ. ಈ ನಿಗಮದ ಅಧೀನದಲ್ಲಿ ತೀವ್ರ-ಕೈಮಗ್ಗ ಅಭಿವೃದ್ಧಿ ಯೋಜನೆ ಉಪಕೇಂದ್ರ ಕಛೇರಿಗಳಿರುತ್ತವೆ.

**ಕರ್ನಾಟಕ ಭೂಸೇನಾ ನಿಗಮ**

ಉಪ-ನಿರ್ದೇಶಕರು, ಕರ್ನಾಟಕ ಭೂಸೇನಾ ನಿಗಮ ಕಚೇರಿಯು ಗುಲಬರ್ಗಾದಲ್ಲಿ ೧೯೮೩ರಲ್ಲಿ ಪ್ರಾರಂಭಗೊಂಡಿತು. ಈ ಕಾರ್ಯಾಲಯವು ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರವನ್ನು ಹೊಂದಿರುವುದು ಜಿಲ್ಲಾ ಪಂಚಾಯತ್, ಜಿಲ್ಲಾಧಿಕಾರಿಗಳು, ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಹಾಗೂ ಇತರ ಸರ್ಕಾರಿ, ಅರೆ ಸರ್ಕಾರಿಸಂಸ್ಥೆಗಳು ಖಾಸಗಿಯವರು ಭೂ ಸೇನೆಗೆ ವಹಿಸಿದ ಅಭಿವೃದ್ಧಿ ಕಾರ್ಯಗಳನ್ನು ಕಟ್ಟಡಗಳ ನಿರ್ವಹಣೆ ಮುಂತಾದವುಗಳನ್ನು ಕೈಗೊಳ್ಳುವ ಮುಖ್ಯಕಾರ್ಯ ಚಟುವಟಿಕೆಯನ್ನು ಈ ಕಾರ್ಯಾಲಯ ಕಾರ್ಯಗತಗೊಳಿಸುವುದು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯ ಕೆಲಸ, ಜಿಲ್ಲಾಧಿಕಾರಿಗಳು ವಹಿಸಿದ ಸರಹದ್ದು ಅಭಿವೃದ್ಧಿ ಕೆಲಸ, ಭೂಕಂಪ ನಿರೋಧಕ ಮನೆಗಳ ನಿರ್ಮಾಣ, ಜಿಲ್ಲಾ ಪಂಚಾಯತ್ ಅಡಿಯಲ್ಲಿ ವಹಿಸಿಕೊಟ್ಟ ಹಿಂದುಳಿದ ಹಾಗೂ ಅಲ್ಪಸಂಖ್ಯಾತರ ವಸತಿ ನಿಲಯ, ಮೀನುಗಾರಿಕೆ ಇಲಾಖೆ ಕೆಲಸ, ಜಿಲ್ಲಾ ಯುವಜನ ಸೇವೆಯಡಿ ಕ್ರೀಡಾ ವಸತಿ ನಿಲಯ, ಕ್ರೀಡಾಂಗಣ ಕಾಮಗಾರಿಗಳು ಪರಿಶಿಷ್ಟ ಜಾತಿ ಪಂಗಡಗಳ ವಸತಿ-ನಿಲಯಗಳು, ಇಂದಿರಾ ಆವಾಸ ಯೋಜನೆಯ ಮನೆಗಳ ನಿರ್ಮಾಣ ಮುಂತಾದ ಕಾಮಗಾರಿಗಳನ್ನು ಈ ನಿಗಮವು ನಿರ್ವಹಿಸುತ್ತಿರುವುದು.

**ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ**

ಜಿಲ್ಲಾ ಖಾದಿಗ್ರಾಮೋದ್ಯೋಗ ಅಧಿಕಾರಿಗಳ ಕಛೇರಿಯು ಗುಲಬರ್ಗಾದಲ್ಲಿ ೧೯೫೭ರಲ್ಲಿ ಪ್ರಾರಂಭಗೊಂಡಿತು. ಗ್ರಾಮೀಣ ಕುಶಲಕರ್ಮಿಗಳು, ಕಸಬುದಾರರು, ವಿದ್ಯಾವಂತ ನಿರುದ್ಯೋಗಿಗಳು ಹಾಗೂ ಮಹಿಳೆಯರಿಗೆ ಅವರವರ ಸ್ಥಳದಲ್ಲಿಯೇ ಉದ್ಯೋಗ ಕಲ್ಪಿಸುವ ಮೂಲಕ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸುವುದು, ಸ್ವಾವಲಂಬನೆಯ ಮನೋಭಾವವನ್ನು ಗ್ರಾಮಾಂತರ ಜನತೆಯಲ್ಲಿ ಮೂಡಿಸಿ ಬಲಿಷ್ಠ ಗ್ರಾಮೀಣ ಸಮಾಜದ ನಿರ್ಮಾಣಕ್ಕೆ ನೆರವಾಗುವ ಉದ್ದೇಶವನ್ನು ಈ ಕಾರ್ಯಾಲಯ ಹೊಂದಿದೆ. ಜಿಲ್ಲಾ ಖಾದಿಗ್ರಾಮೋದ್ಯೋಗ ಅಧಿಕಾರಿಗಳು ಕಛೇರಿಯ ಮುಖ್ಯಾಧಿಕಾರಿಗಳಾಗಿರುವರು. ಕರ್ನಾಟಕ ಖಾದಿ ಗ್ರಾಮೋದ್ಯೋಗ ಮಂಡಳಿ ಕಾಯ್ದೆ ೧೯೫೬ನ್ನು ಕಾರ್ಯಾಲಯ ಅನ್ವಯಗೊಳಿಸುತ್ತದೆ. ಗ್ರಾಮೋದ್ಯೋಗಗಳಲ್ಲಿ ಖನಿಜ ಅಧಾರಿತ ಉದ್ದಿಮೆಗಳು, ಅರಣ್ಯ ಆಧಾರಿತ ಉದ್ದಿಮೆಗಳು, ಕೃಷಿ ಆಧಾರಿತ ಉದ್ದಿಮೆಗಳು, ಇಂಜಿನೀಯರಿಂಗ್ ಮತ್ತು ಅಸಾಂಪ್ರದಾಯಿಕ ಶಕ್ತಿಯ ಉದ್ದಿಮೆಗಳು, ವಸ್ತ್ರೋದ್ಯಮಗಳು, ಪಾಲಿವಸ್ತ್ರ ಮತ್ತು ರಾಸಾಯನಿಕ ಆಧಾರಿತ ಉದ್ದಿಮೆಗಳು, ಇಲೆಕ್ಟ್ರಾನಿಕ್ಸ್ ಉದ್ದಿಮೆಗಳು, ಹೀಗೆ ವಿಭಾಗಗಳನ್ನು ಮಾಡಿ ಧನಸಹಾಯ ಹಾಗೂ ತಾಂತ್ರಿಕ ನೆರವು ನೀಡುವುದು, ಬಡ್ಡಿರಹಿತ ಸಾಲ ಹಾಗೂ ವಿವಿಧ ಕೈಗಾರಿಕೆಗಳಲ್ಲಿ ತರಬೇತಿ ನೀಡುವುದು ಮುಂತಾದ ಕಾರ್ಯ ಚಟುವಟಿಕೆಗಳನ್ನು ಕಾರ್ಯಾಲಯ ಕಾರ್ಯಗತಗೊಳಿಸುತ್ತಿದೆ. ವಿಭಾಗೀಯ ಅಧಿಕಾರಿಗಳು ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಗುಲಬರ್ಗಾ ಇವರು ಮೇಲಾಧಿಕಾರಿಗಳು ಆಗಿರುತ್ತಾರೆ.

**ಕರ್ನಾಟಕ ಗೃಹ ಮಂಡಳಿ**

ಹೆಚ್ಚುತ್ತಿರುವ ಬೇಡಿಕೆಗೆ ಅನುಗುಣವಾಗಿ ಸಾರ್ವಜನಿಕರಿಗೆ ವಸತಿ ಪೂರೈಸುವ ಉದ್ದೇಶದಿಂದ ಕಾರ್ಯನಿರ್ವಾಹಕ ಅಭಿಯಂತರರು ಕರ್ನಾಟಕ ಗೃಹ ಮಂಡಳಿ ಕಾರ್ಯಾಲಯವು ಗುಲಬರ್ಗಾದಲ್ಲಿ (೧೯೭೭)ರಲ್ಲಿ ಕಾರ್ಯಾರಂಭಮಾಡಿತು.

ಮಂಡಳಿಯು ಪ್ರಾರಂಭದಲ್ಲಿ ಐದು ಜಿಲ್ಲೆಗಳಾದ ಗುಲಬರ್ಗಾ ಬೀದರ್, ಬಳ್ಳಾರಿ, ರಾಯಚೂರು, ಹಾಗೂ ವಿಜಾಪುರ ಜಿಲ್ಲೆಗಳನ್ನೊಳಗೊಂಡಿತ್ತು. ನಂತರ ೧೯೭೧ರಲ್ಲಿ ಇವನ್ನು ವಿಭಾಗಿಸಿ ಎರಡು ವಿಭಾಗಗಳಾಗಿ ಮಾಡಿ ಗುಲಬರ್ಗಾ ವಿಭಾಗಕ್ಕೆ ಗುಲಬರ್ಗಾ ಹಾಗೂ ಬೀದರ್ ಜಿಲ್ಲೆಗಳ ಆಡಳಿತ ನೀಡಲಾಯಿತು. ಕಾರ್ಯನಿರ್ವಾಹಕ ಅಭಿಯಂತರರು ಕಛೇರಿಯ ಮುಖ್ಯಸ್ಥರಾಗಿರುವರು. ಕರ್ನಾಟಕ ಗೃಹ ಮಂಡಳಿ ಕಾಯ್ದೆ ಹಾಗೂ ಲೋಕೋಪಯೋಗಿ ಇಲಾಖೆಯವರು ಉಪಯೋಗಿಸುವ ನಿಯಮ ಅಧಿನಿಯಮಗಳನ್ನು ಈ ಕಛೇರಿ ತನ್ನ ಕೆಲಸಗಳಿಗೆ ಅನ್ವಯಗೊಳಿಸುತ್ತವೆ. ಸಾರ್ವಜನಿಕ ಅವಶ್ಯಕತೆಗೆ ಅನುಗುಣವಾಗಿ ಎಲ್ಲ ವರ್ಗದ ಜನರಿಗೆ ಮನೆಗಳನ್ನು ಕಟ್ಟಿ ಒದಗಿಸುವುದು, ಹೊಸ ಬಡಾವಣೆಗಳನ್ನು ನಿರ್ಮಿಸುವುದು ಹಾಗೂ ಆಧುನಿಕ ತಾಂತ್ರಿಕತೆ ಉಪಯೋಗಿಸಿ ಉತ್ತಮ ದರ್ಜೆಯ ಕಡಿಮೆ ವೆಚ್ಚದ ಮನೆಗಳ ನಿರ್ಮಾಣ, ರಾಜ್ಯ ಹಾಗೂ ಕೇಂದ್ರ ಸರ್ಕಾರದ ಗೃಹ ಯೋಜನೆಗಳನ್ನು ಕಾರ್ಯಗತಗೊಳಿಸುವುದು ಮುಂತಾದ ಕಾರ್ಯಚಟುವಟಿಕೆಗಳನ್ನು ಈ ಕಾರ್ಯಾಲಯ ನಡೆಸಿಕೊಂಡು ಬರುತ್ತಿದೆ. ೧೯೬೭ರಿಂದ ಇಲ್ಲಿಯವರೆಗೆ ಮಂಡಳಿಯ ಈ ವಿಭಾಗದಲ್ಲಿ ೨,೬೩೮ ಮನೆಗಳನ್ನು ನಿರ್ಮಿಸಿದ್ದು ಅವುಗಳನ್ನು ವಿವಿಧ ವರ್ಗದ ಜನರಿಗೆ ಒದಗಿಸಲಾಗಿದೆ. (ಅಧ್ಯಾಯ ೧೨ ನೋಡುವುದು).

## ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ

ಸಣ್ಣ ಕೈಗಾರಿಕಾ ಘಟಕಗಳ ಸ್ಥಾಪನೆಗೆ ಸಾಲದ ರೂಪದಲ್ಲಿ ಆರ್ಥಿಕ ನೆರವು ನೀಡುವ ಉದ್ದೇಶದಿಂದ ಉಪ ಪ್ರಧಾನ ವ್ಯವಸ್ಥಾಪಕರು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ವಲಯ ಕಛೇರಿಯು ೧೯೮೭ರಲ್ಲಿ ಗುಲಬರ್ಗಾದಲ್ಲಿ ಪ್ರಾರಂಭಗೊಂಡಿತು. ಬೀದರ, ಗುಲಬರ್ಗಾ, ರಾಯಚೂರು, ಬಳ್ಳಾರಿ ಜಿಲ್ಲೆಗಳ ಅಧಿಕಾರ ವ್ಯಾಪ್ತಿಯನ್ನು ಉಪ ಪ್ರಧಾನ ವ್ಯವಸ್ಥಾಪಕರು ಹೊಂದಿದ್ದು ಅವರ ಅಧೀನದಲ್ಲಿ ಐದು ಶಾಖಾ ಕಛೇರಿಗಳು ಇದ್ದು ಇವುಗಳಲ್ಲಿ ಗುಲಬರ್ಗಾದಲ್ಲಿಯ ಶಾಖಾ ಕಛೇರಿಯು 'ಎ' ದರ್ಜೆಯದಾಗಿದ್ದು ಇನ್ನೂಳಿದ ನಾಲ್ಕು ಶಾಖಾ ಕಛೇರಿಗಳು ಬಿದರ್, ರಾಯಚೂರು, ಕೊಪ್ಪಳ ಹಾಗೂ ಬಳ್ಳಾರಿಗಳಲ್ಲಿದ್ದು 'ಬಿ' ದರ್ಜೆಯ ಕಾರ್ಯಾಲಯಗಳಾಗಿವೆ. ಇದಲ್ಲದೆ ಎರಡು ಪ್ರದೇಶ ಕಛೇರಿಯ (ಫಿಲ್ಡ್ ಆಫೀಸ್) ಒಂದು ಯಾದಗಿರಿ ಹಾಗೂ ಹೊಸಪೇಟೆಗಳಲ್ಲಿ ಇವೆ. ವಿವಿಧ ಯೋಜನೆ ಅಡಿ ಸಾಲ ಮಂಜೂರಾತಿ ಶಾಖಾ ಕಛೇರಿಗಳಿಗೆ ಸಲಹೆ ನೀಡುವುದು,ಸಾಲ ವಸೂಲಾತಿ ಮುಂತಾದ ಚಟುವಟಿಕೆಗಳನ್ನು ಈ ಕಾರ್ಯಾಲಯ ನಡೆಸಿಕೊಂಡು ಬರುತ್ತಿದೆ. ೮ ಲಕ್ಷ ರೂ.ಗಳವರೆಗಿನ ಸಾಲವನ್ನು ಮಂಜೂರು ಮಾಡುವ ಅಧಿಕಾರವನ್ನು ಈ ಕಾರ್ಯಾಲಯ ಹೊಂದಿದೆ. ವಿವಿಧ ಯೋಜನೆಯಡಿ ಸಣ್ಣ ಕೈಗಾರಿಕೆ, ಸಾರಿಗೆ, ಹೋಟೆಲು ಉಧ್ಯಮ, ನರ್ಸಿಂಗ್ ಹೊಂ, ಪ್ರವಾಸೋದ್ಯಮ, ಅಂಗವಿಕಲ ಉದ್ಯಮಿಗಳು, ಗುಣ ನಿಯಂತ್ರಣ ಸೌಲಭ್ಯಗಳು, ಮಹಿಳಾ ಉದ್ದಿಮೆದಾರರು, ಅರ್ಹ ವೃತ್ತಿದಾರರು, ಸ್ವಯಂ ಉದ್ಯೋಗ ಪ್ರಾರಂಭಿಸುವವರು ಮುಂತಾದವುಗಳಿಗೆ ಆರ್ಥಿಕ ನೆರವನ್ನು ಈ ಕಾರ್ಯಾಲಯ ಒದಗಿಸುತ್ತದೆ.

## ಗುಲಬರ್ಗಾ ಸಹಕಾರಿ ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ

ಕರ್ನಾಟಕ ಹಾಲು ಮಹಾಮಂಡಳಿಯ (ಕೆ.ಎಮ್.ಎಫ್) ಘಟಕವು ೧೯೮೮ರಲ್ಲಿ ಗುಲಬರ್ಗಾ ಹಾಗೂ ಬೀದರ ಜಿಲ್ಲೆಗಳಲ್ಲಿ ಕಾರ್ಯಾರಂಭ ಮಾಡಿತು. ಈ ಒಕ್ಕೂಟವು ಅಪರ ನಿಬಂಧಕರು (ಬಳಕೆ ಮತ್ತು ಮಾರಾಟ) ಸಹಕಾರ ಸಂಘಗಳು, ಬೆಂಗಳೂರು ಇವರಿಂದ ೧೯೮೫ರಲ್ಲಿ ನೊಂದಣಿಗೊಂಡಿದೆ. ಹಾಗೂ ಗುಲಬರ್ಗಾ ಮತ್ತು ಬೀದರ್ ಜಿಲ್ಲೆಯ ಕಾರ್ಯವ್ಯಾಪ್ತಿ ಹೊಂದಿದೆ. ೧೯೯೩-೯೪ನೇ ಸಾಲಿನ ಅಂತ್ಯಕ್ಕೆ ೨೮೬ ಹಾಲು ಉತ್ಪಾದಕರ ಸಹಕಾರಿ ಸಂಘಗಳು ಕಾರ್ಯಚರಣೆಯಲ್ಲಿವೆ. ಇವುಗಳಲ್ಲಿ ೭೮ ಸಂಘಗಳು ಗುಲಬರ್ಗಾ ಹಾಗೂ ೨೦೮ ಸಂಘಗಳು ಬೀದರನಲ್ಲಿ ಇದ್ದು ಒಟ್ಟು ೫೬,೦೩೩ ಜನ ಸದಸ್ಯ ಸಂಖ್ಯೆಯನ್ನು ಹೊಂದಿದೆ. ವಾರ್ಷಿಕ ಸುಮಾರು ೪೧,೩೪೩ ಕಿ. ಗ್ರಾಂ ನಷ್ಟು ಹಾಲು ಉತ್ಪಾದನೆಗೊಳ್ಳುತ್ತಿದೆ. ಕ್ಷೀರ ಕ್ರಾಂತಿಗೆ ತಾಂತ್ರಿಕ ಸೌಲಭ್ಯ ಒದಗಿಸುವುದು, ಪಶುವೈದ್ಯಕೀಯ ಸೌಲಭ್ಯ ಕೃತಕ ಗರ್ಭಧಾರಣೆ, ಹಸಿರು ಮೇವು ಅಭಿವೃದ್ಧಿ, ಪೌಷ್ಠಿಕ ಪಶುಆಹಾರ ಮಾರಾಟ, ತರಬೇತಿ ಕಾರ್ಯಕ್ರಮ, ಹಾಲು ಮತ್ತು ಹಾಲಿನ ಉತ್ಪನ್ನಗಳ ಮಾರುಕಟ್ಟೆ ಸೌಲಭ್ಯ ಒದಗಿಸುವುದು ಡೈರಿ ಮತ್ತು ಶೀಥಲೀಕರಣ ಘಟಕಗಳ ವಿಸ್ತರಣಾ ಚಟುವಟಿಕೆಗಳು ಒಕ್ಕೂಟದ ಮುಖ್ಯ ಕರ್ತವ್ಯಗಳಾಗಿವೆ.

ವಿಶೇಷ ಘಟಕ ಯೋಜನೆ ಸಹಕಾರಿ ಅಭಿವೃದ್ಧಿ ಯೋಜನೆ ಡೈರಿ ಟೆಕ್ನಾಲಜಿ ಮಿಶನ್ ಹಾಗೂ ಮಕ್ಕಳ ಕ್ಷೀರ ಯೋಜನೆ ಮುಂತಾದ ಯೋಜನೆಗಳನ್ನು ಈ ಒಕ್ಕೂಟ ಜಾರಿಗೊಳಿಸುತ್ತಿದೆ.

## ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ

ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯು ಗುಲಬರ್ಗಾದಲ್ಲಿ ೧೯೯೨ರಲ್ಲಿ ಅಸ್ತಿತ್ವಕ್ಕೆ ಬಂದಿತು. ಈ ಸಂಸ್ಥೆಯ ಮುಖ್ಯ ಉದ್ದೇಶ ತನ್ನ ಕಾರ್ಯ ವ್ಯಾಪ್ತಿಯ ಜಿಲ್ಲೆಗಳಲ್ಲಿ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಅನುಷ್ಠಾನ, ಅಧ್ಯಯನ ಮುಂತಾದವುಗಳು. ಇದಕ್ಕೂ ಪೂರ್ವದಲ್ಲಿ ಮಂಡಳಿಯ ಕಾರ್ಯಗಳನ್ನು ಬೆಂಗಳೂರಿನಲ್ಲಿ ಉನ್ನತಾಧಿಕಾರಿಗಳ ಸಮಿತಿಯೊಂದು ನೋಡಿಕೊಳ್ಳುತ್ತಿತ್ತು. ಕಾರ್ಯದರ್ಶಿಗಳು ಮಂಡಳಿ ಕಾರ್ಯಾಲಯದ ಮುಖ್ಯಸ್ಥರಾಗಿದ್ದು ಗುಲಬರ್ಗಾ, ಬೀದರ್, ರಾಯಚೂರು ಹಾಗೂ ಬಳ್ಳಾರಿ ಜಿಲ್ಲೆಗಳು ಇವರ ಅಧಿಕಾರವ್ಯಾಪ್ತಿಗೆ ಒಳಪಡುತ್ತಿವೆ. ಕಛೇರಿ ಕಾರ್ಯಗಳಲ್ಲಿ ಸಹಕರಿಸಲು ಕಾರ್ಯದರ್ಶಿಗಳಿಗೆ ಒಬ್ಬರು ಉಪ-ಕಾರ್ಯದರ್ಶಿಗಳು,ಹಣಕಾಸು ನಿಯಂತ್ರಕರು ಜಂಟಿ ನಿರ್ದೇಶಕರು (ಯೋಜನೆ) ಕಾರ್ಯಪಾಲ ಅಭಿಯಂತರರು ಹಾಗೂ ಇನ್ನಿತರ ೩೫ ಜನ ಸಿಬ್ಬಂದಿ ಇದೆ. ಮಂಡಳಿಯು ತನ್ನ ಅಧಿಕಾರ ವ್ಯಾಪ್ತಿಗೆ ಒಳಪಡುವ ಪ್ರದೇಶಗಳಲ್ಲಿ ರಸ್ತೆ ಮತ್ತು ಸೇತುವೆ ಕಾಮಗಾರಿಗಳನ್ನು ಶಿಕ್ಷಣ ಹಾಗೂ ಆರೋಗ್ಯ ಸಂಸ್ಥೆಗಳ ಕಟ್ಟಡಗಳನ್ನು ಸಣ್ಣ ಹಾಗೂ ಮಧ್ಯಮ ವರ್ಗದ ನೀರಾವರಿ ಯೋಜನೆಗಳನ್ನು ಹಿಂದುಳಿದ ವರ್ಗದವರಿಗಾಗಿ ವಸತಿ ನಿಲಯಗಳನ್ನು ಮತ್ತು ಹರಿಜನ ಬಸ್ತಿ ಹಾಗೂ ತಾಂಡಾಗಳ ವಿದ್ಯುದೀಕರಣ ಚಟುವಟಿಕೆಗಳನ್ನು ಹಮ್ಮಿಕೊಂಡು ಕಾರ್ಯಗತಗೊಳಿಸುವುದು. ೧೯೯೦ ರಿಂದ ೧೯೯೭ರವರೆಗೆ ಮಂಡಳಿ ಸುಮಾರು ೩೨೫ ಕೋಟಿ ರೂಗಳ ಅಭಿವೃದ್ಧಿ ಕಾರ್ಯಕೈಗೊಂಡಿದೆ. ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಕಾಯ್ದೆ ೧೯೯೨ ಹಾಗೂ ಮಂಡಳಿ ನಿಯಮಗಳು ೧೯೯೩ ಇವುಗಳನ್ನು ಕಛೇರಿ ತನ್ನ ಕಾರ್ಯಗಳಿಗೆ ಅನ್ವಯಗೊಳಿಸುತ್ತಿದೆ. ಪ್ರತೀ ತಿಂಗಳು ಪ್ರಗತಿ ವರದಿಯನ್ನು ಮಂಡಳಿ ಪ್ರಕಟಿಸುತ್ತಿದೆ. ಕಾರ್ಯದರ್ಶಿಗಳು ಯೋಜನಾ ಸಾಂಸ್ಥಿಕ ಹಣಕಾಸು ತಾಂತ್ರಿಕ ಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಬೆಂಗಳೂರು ಇವರ ಅಧೀನದಲ್ಲಿ ಮಂಡಳಿ ಕಾರ್ಯನಿರ್ವಹಿಸುತ್ತಿದೆ.

## ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ

ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆಯನ್ನು ಪೂರೈಸಲು ಮತ್ತು ಗ್ರಾಹಕರಿಗೆ ಉತ್ತಮ ಸೇವಾ ಸೌಲಭ್ಯಗಳನ್ನು ಒದಗಿಸುವ ಉದ್ದೇಶದಿಂದ ಅಧೀಕ್ಷಕ ಅಭಿಯಂತರರು (ವಿ) ವೃತ್ತ ಕಛೇರಿಯು ೧೯೬೭ರಲ್ಲಿ ಗುಲಬರ್ಗಾದಲ್ಲಿ ಪ್ರಾರಂಭಗೊಂಡಿತು. ಗುಲಬರ್ಗಾ ಹಾಗೂ ಬೀದರ್ ಜಿಲ್ಲೆಯ ಅಧಿಕಾರ ವ್ಯಾಪ್ತಿಯನ್ನು ಈ ವೃತ್ತ ಕಛೇರಿ ಹೊಂದಿದ್ದು ಅಧೀಕ್ಷಕ ಇಂಜಿನಿಯರ್ (ವಿ) ವಲಯದ ಮುಖ್ಯಾಧಿಕಾರಿಗಳು ಆಗಿರುತ್ತಾರೆ. ಇವರ ಆಡಳಿತ ವ್ಯಾಪ್ತಿಯಲ್ಲಿ ಗುಲಬರ್ಗಾ ವಿಭಾಗ, ಯಾದಗಿರಿ ವಿಭಾಗ ಹಾಗೂ ಬೀದರ್ ವಿಭಾಗಗಳಾಗಿವೆ. ವಿವಿಧ ಕಾಮಗಾರಿ ಮಂಜೂರಾತಿ, ವಿದ್ಯುತ್ ವಿತರಣೆ, ಮಾರ್ಗಗಳ ದುರಸ್ತಿ, ವಿದ್ಯುತ್ ಜಾಲದ ಪಾಲನೆ ಮುಂತಾದ ಕಾರ್ಯಚಟುವಟಿಕೆಗಳನ್ನು ಈ ಕಾರ್ಯಾಲಯ ನಡೆಸುತ್ತದೆ. ಮುಖ್ಯ ಇಂಜಿನಿಯರ್ (ವಿ) ವಲಯ ಕಛೇರಿ ಗುಲಬರ್ಗಾ ಇವರು ತತ್‌ಕ್ಷಣದ ಮೇಲಾಧಿಕಾರಿಗಳಾಗಿರುತ್ತಾರೆ.

## ಗುಲಬರ್ಗಾ ನಗರಾಭಿವೃದ್ಧಿ ಪ್ರಾಧಿಕಾರ

ಗುಲಬರ್ಗಾ ನಗರದ ಯೋಜನಾ ನಕ್ಷೆಯನ್ನು ತಯಾರಿಸುವುದು, ಅನಧೀಕೃತ ಕಟ್ಟಡಗಳ ಬೆಳವಣಿಗೆಯನ್ನು ತಡೆಯುವುದು, ನಿರಾಶ್ರಿತರಿಗೆ ನಿವೇಶನ ಒದಗಿಸುವುದು, ಆರ್ಥಿಕವಾಗಿ ಹಿಂದುಳಿದ ವರ್ಗ ಹಾಗೂ ಪರಿಶಿಷ್ಟ ಜಾತಿ ಜನಾಂಗದವರಿಗೆ ರಿಯಾಯಿತಿಯಲ್ಲಿ ನಿವೇಶನ ಒದಗಿಸುವ ಉದ್ದೇಶದಿಂದ ನಗರಾಭಿವೃದ್ಧಿ ಪ್ರಾಧಿಕಾರವು ಗುಲಬರ್ಗಾದಲ್ಲಿ ೧೯೮೮ರಲ್ಲಿ ಪ್ರಾರಂಭಗೊಂಡಿತು. ಇದಕ್ಕೂ ಮೊದಲು ಇದು ನಾಗರಾಭಿವೃದ್ಧಿ ಮಂಡಳಿ ಎಂದು ಕಾರ್ಯನಿರ್ವಹಿಸುತ್ತಿತ್ತು. ಆಯುಕ್ತರು ಪ್ರಾಧಿಕಾರದ ಮುಖ್ಯಸ್ಥರಾಗಿದ್ದು, ಗುಲಬರ್ಗಾ ನಗರ ಪ್ರದೇಶ ಹಾಗೂ ಅಧಿಸೂಚಿತ ಪ್ರದೇಶ ಆಡಳಿತ ವ್ಯಾಪ್ತಿಯನ್ನು ಹೊಂದಿರುವರು. ವಿವಿಧ ಹಂತದಲ್ಲಿ ೩೩ ಜನ ಸಹಾಯಕ ಸಿಬ್ಬಂದಿ ಇರುವರು. ನಿವೇಶನ ರಹಿತರಿಗೆ, ಭೂಸ್ವಾಧೀನ ಮಾಡಿಕೊಂಡು ನಿವೇಶನ ಹಂಚುವುದು ಮತ್ತು ಅಭಿವೃದ್ಧಿ ಕೆಲಸ ನಿರ್ವಹಿಸುವುದು ಮುಂತಾದ ಕಾರ್ಯ ಚಟುವಟಿಕೆಗಳನ್ನು ಈ ಕಾರ್ಯಾಲಯ ನಡೆಸುತ್ತಿದೆ. ಪ್ರಾಧಿಕಾರವು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಅಧಿನಿಯಮ ೧೯೮೭ ಮತ್ತು ಕರ್ನಾಟಕ ಪಟ್ಟಣ ಹಾಗೂ ಗ್ರಾಮೀಣ ಯೋಜನಾ ಕಾಯ್ದೆ ೧೯೬೧ ಇವುಗಳನ್ನು ಅನ್ವಯಗೊಳಿಸುತ್ತಿದೆ. ಕಾರ್ಯದರ್ಶಿಗಳು ವಸತಿ ಮತ್ತು ನಗರಾಭಿವೃದ್ಧಿ ಬೆಂಗಳೂರು ಇವರು ತತ್‌ಕ್ಷಣದ ಮೇಲಾಧಿಕಾರಿಗಳು ಆಗಿರುತ್ತಾರೆ. (ವಿವರಕ್ಕೆ ಅಧ್ಯಾಯ-೧೨ ನೋಡುವುದು).

## ಆಕಾಶವಾಣಿ ಕೇಂದ್ರ

ಆರ್ಥಿಕವಾಗಿ ರಾಜ್ಯದ ಹಿಂದುಳಿದ ಪ್ರದೇಶವೆಂದು ಸಾಮಾನ್ಯವಾಗಿ ಪರಿಗಣಿಸಿದ್ದರೂ ಹೈದರಾಬಾದ್ ಕರ್ನಾಟಕ ಪ್ರದೇಶದ ಜಿಲ್ಲೆಗಳು ಮೈಗೂಡಿಸಿಕೊಂಡಿರುವ ಶ್ರೀಮಂತ ಸಂಸ್ಕೃತಿ, ಪರಂಪರೆ, ಕಲೆ, ಸಾಹಿತ್ಯ ಮತ್ತು ಸಂಗೀತವನ್ನು ರಾಜ್ಯದ ಇತರೇ ಭಾಗಗಳಿಗೆ ಮತ್ತು ರಾಜ್ಯದ ಹೊರಗಿನವರಿಗೆ ಪರಿಚಯಿಸುವ ಉದ್ದೇಶದಿಂದ ಗುಲಬರ್ಗಾ ಆಕಾಶವಾಣಿ ಕೇಂದ್ರವನ್ನು ೧೯೭೬ ರಲ್ಲಿ ಪ್ರಾರಂಭಿಸಲಾಯಿತು. ಕೇಂದ್ರದ ಉಸ್ತುವಾರಿಯನ್ನು ಸ್ಟೇಷನ್ ಇಂಜಿನಿಯರ್/ನಿಲಯದ ನಿರ್ದೇಶಕರು ನೋಡಿಕೊಳ್ಳುತ್ತಿದ್ದಾರೆ. ಕೇಂದ್ರವು ೧೦ ಕಿ.ವ್ಯಾ. ಶಕ್ತಿಯ ಪ್ರೇಷಕ ಹೊಂದಿದ್ದು, ಸುಮಾರು ೧೧೦ ಕಿ.ಮೀ. ಪ್ರದೇಶ ಪ್ರಸಾರ ವ್ಯಾಪ್ತಿಗೆ ಒಳಪಡುತ್ತದೆ. ನಿಲಯ ನಿರ್ದೇಶಕರ ನೆರವಿಗೆ ವಿವಿಧ ದರ್ಜೆಯ ಒಟ್ಟು ೧೦೪ ಜನ ಸಿಬ್ಬಂದಿ ವರ್ಗವಿದೆ.

## ಆದಾಯ ತೆರಿಗೆ ಇಲಾಖೆ

ಕೇಂದ್ರ ಸರ್ಕಾರದ ಕಂದಾಯ ಮೂಲಗಳಲ್ಲೊಂದಾದ ಆದಾಯ ತೆರಿಗೆಗೆ ಸಂಬಂಧಿಸಿದಂತೆ ನೇರ ತೆರಿಗೆ ಹಾಗೂ ನಿಯಮಗಳನ್ನು ಜಾರಿಗೊಳಿಸುವ ಉದ್ದೇಶದಿಂದ ಸಹಾಯಕ ಆಯುಕ್ತರು ವರಮಾನ ತೆರಿಗೆ ವೃತ್ತ(೧) ಕಾರ್ಯಾಲಯವು ಗುಲಬರ್ಗಾದಲ್ಲಿ ೧೯೮೨ ರಿಂದ ಕಾರ್ಯಾರಂಭ ಮಾಡಿದೆ. ಇದಕ್ಕೆ ಪೂರ್ವದಲ್ಲಿ (೧೯೫೬ ರಿಂದ) ಆದಾಯ ತೆರಿಗೆ ಅಧಿಕಾರಿಗಳು ಕಛೇರಿಯ ಮುಖ್ಯಸ್ಥರಾಗಿದ್ದರು. ಸಹಾಯಕ ಆಯುಕ್ತರ ಅಧಿಕಾರ ವ್ಯಾಪ್ತಿಯು ಗುಲಬರ್ಗಾ ಮತ್ತು ಬೀದರ್ ಜಿಲ್ಲೆಗಳಾಗಿವೆ. ಆದಾಯ ತೆರಿಗೆ ಕಾಯ್ದೆ (೧೯೬೧), ಆದಾಯ ತೆರಿಗೆ ನಿಯಮಗಳು (೧೯೬೨), ಸಂಪತ್ತು ತೆರಿಗೆ ಕಾಯ್ದೆ (೧೯೫೬) ಹಾಗೂ ಉಡುಗೊರೆ (ಗಿಫ್ಟ್) ತೆರಿಗೆ ಅಧಿನಿಯಮಗಳು (೧೯೫೮) ಮುಂತಾದ ನಿಯಮ, ಅಧಿನಿಯಮ ಹಾಗೂ ಕಾಲಕಾಲಕ್ಕೆ ತೆರಿಗೆಯ ನಿಯಮಗಳಲ್ಲಿ ತಿದ್ದುಪಡಿಗಳನ್ನು ಈ ಕಾರ್ಯಾಲಯ ಅನ್ವಯಗೊಳಿಸುತ್ತದೆ. ಉಪ-ಆಯುಕ್ತರು ಆದಾಯ ತೆರಿಗೆ ಬೆಳಗಾವಿ ವಲಯ, ಬೆಳಗಾವಿ ಇವರು ತತ್‌ಕ್ಷಣದ ಮೇಲಾಧಿಕಾರಿಗಳು ಆಗಿರುತ್ತಾರೆ.

## ಕೇಂದ್ರ ಅಬಕಾರಿ ಮತ್ತು ಸೀಮಾ ಸುಂಕ ಇಲಾಖೆ

ಸಹಾಯಕ ಆಯುಕ್ತರು, ಕೇಂದ್ರ ಅಬಕಾರಿ ಇವರ ಕಾರ್ಯಾಲಯವು ಗುಲಬರ್ಗಾದಲ್ಲಿ ೧೯೮೪ ರಿಂದ ಕಾರ್ಯಾರಂಭ ಮಾಡಿದೆ. ಕೇಂದ್ರದ ಕಂದಾಯ ಮೂಲಗಳಲ್ಲೊಂದಾದ ಕೇಂದ್ರ ಅಬಕಾರಿ ಸುಂಕ ಸಂಗ್ರಹಣೆ ಹಾಗೂ ಹಲವಾರು ಅಬಕಾರಿ ಸಂಬಂಧಿತ ಅಧಿನಿಯಮಗಳನ್ನು ಜಾರಿಗೊಳಿಸುವ ಉದ್ದೇಶವನ್ನು ಈ ಕಛೇರಿ ಹೊಂದಿದೆ. ಸಹಾಯಕ ಆಯುಕ್ತರು ಕಾರ್ಯಾಲಯದ ಮುಖ್ಯಸ್ಥರಾಗಿದ್ದು ಇವರ ಅಧೀನಕ್ಕೆ ಒಳಪಟ್ಟಂತೆ ಬೀದರ್, ಶಹಾಬಾದ್, ಯಾದಗಿರಿ, ಹುಮ್ನಾಬಾದ್‌ಗಳ ಎಫ್.ಎಸ್. ರೇಂಜ್ ಕಛೇರಿಗಳು ಕಾರ್ಯನಿರತವಾಗಿವೆ. ಆಯುಕ್ತರು, ಕೇಂದ್ರ ಅಬಕಾರಿ, ಬೆಳಗಾವಿ ಇವರು ತತ್‌ಕ್ಷಣದ ಮೇಲಾಧಿಕಾರಿಗಳು ಆಗಿರುತ್ತಾರೆ.

## ನೆಹರು ಯುವ ಕೇಂದ್ರ

ಗ್ರಾಮೀಣ ಯುವಜನರಿಗೆ ಕ್ರೀಡಾ ಚಟುವಟಿಕೆಗಳಲ್ಲಿ ಉತ್ತೇಜನ ನೀಡುವ ದೃಷ್ಟಿಯಿಂದ ಭಾರತ ಸರ್ಕಾರದ ಸ್ವಾಯತ್ತ ಸಂಸ್ಥೆಯಾಗಿರುವ ನೆಹರು ಯುವ ಕೇಂದ್ರವು ೧೯೭೭ ರಲ್ಲಿ ಗುಲಬರ್ಗಾದಲ್ಲಿ ಕಾರ್ಯಾರಂಭ ಮಾಡಿತು. ಯುವಜನ ಸಮನ್ವಯ ಅಧಿಕಾರಿಗಳು ಕೇಂದ್ರದ ಮುಖ್ಯಸ್ಥರಾಗಿದ್ದಾರೆ. ರಾಷ್ಟ್ರೀಯ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಯುವ ಜನರನ್ನು ಪ್ರೇರೇಪಿಸುವುದು, ಸಾಂಸ್ಕೃತಿಕ ಹಾಗೂ ಜನಪದ ಕಲೆಗಳ ಅಭಿವೃದ್ಧಿಗಾಗಿ ಶ್ರಮಿಸುವುದು ಮುಂತಾದ ಕಾರ್ಯ ಚಟುವಟಿಕೆಗಳನ್ನು ಈ ಕೇಂದ್ರ ನಡೆಸಿಕೊಂಡು ಬರುವುದು. (ಅಧ್ಯಾಯ-೧೬ ನೋಡಿ).

## ಭಾರತೀಯ ಅಂಚೆ ಇಲಾಖೆ

ಜಿಲ್ಲೆಯ ಜನತೆಗೆ ಅಂಚೆಯ ಸೇವೆ ಒದಗಿಸುವ ಉದ್ದೇಶದಿಂದ ಅಂಚೆಯ ಹಿರಿಯ ಅಧೀಕ್ಷಕರ ಕಾರ್ಯಾಲಯವು, ೧೯೫೦ ರಲ್ಲಿ ಗುಲಬರ್ಗಾದಲ್ಲಿ ಕಾರ್ಯಾರಂಭ ಮಾಡಿದೆ. ಪ್ರಾರಂಭದಲ್ಲಿ ಸಹಾಯಕ ಅಧೀಕ್ಷಕರ ಮುಖ್ಯಸ್ಥತೆ ಇದ್ದು, ೧೯೮೦ ರಿಂದ ಈಚೆ ಹುದ್ದೆಯ ಹೆಸರು ಈಗಿರುವಂತೆ ಅಂಚೆಯ ಹಿರಿಯ ಅಧೀಕ್ಷಕರೆಂದು ಬದಲಾವಣೆಗೊಂಡಿದೆ.

ಜಿಲ್ಲೆಯ ೭೨೧ ಅಂಚೆ ಕಛೇರಿಗಳ ಉಸ್ತುವಾರಿ ನಿಯಂತ್ರಣ ಹಾಗೂ ಅಂಚೆ ಅವಶ್ಯಕತೆಗಳ ಪೂರೈಕೆ ಈ ಕಾರ್ಯಾಲಯದ ಮುಖ್ಯ ಕಾರ್ಯ ಚಟುವಟಿಕೆಗಳಾಗಿವೆ. ಸಣ್ಣ ಉಳಿತಾಯ ಖಾತೆಯನ್ನು ಅಂಚೆ ಕಛೇರಿಗಳಲ್ಲಿ ತೆರೆಯಲು ಜನರಲ್ಲಿ ಆಸಕ್ತಿ ಮೂಡಿಸುವುದು, ವಿವಿಧ ಉಳಿತಾಯ ಯೋಜನೆಗಳ ಅನುಷ್ಠಾನ ಅಂಚೆಯ ಸೇವೆಯ ಜೊತೆಗೆ ಸಣ್ಣ ಉಳಿತಾಯಕ್ಕೆ ಸಂಬಂಧಪಟ್ಟ ಸೇವೆಯನ್ನು ಜನರಿಗೆ ನೀಡುವುದು ಸಹ ಈ ಕಾರ್ಯಾಲಯದ ಇತರ ಚಟುವಟಿಕೆಗಳಾಗಿವೆ. ಶೀಘ್ರ ಅಂಚೆಯ ಸೇವೆ ಒದಗಿಸಲು ಗಣಕಯಂತ್ರದ ಉಪಯೋಗ, ಉಪಗ್ರಹದ ಮೂಲಕ ಹಣಕಳಿಸುವ ವ್ಯವಸ್ಥೆ ಹಾಗೂ ಪಂಚಾಯತಿ ಸಂಚಾರ ಸೇವಾ ಕೇಂದ್ರಗಳ ಸ್ಥಾಪನೆ ಮುಂತಾದ ಯೋಜನೆಗಳು ಕಾರ್ಯಾಲಯದ ಮುಂದಿವೆ. ಧಾರವಾಡದಲ್ಲಿರುವ ಪೋಸ್ಟ್ ಮಾಸ್ಟರ್ ಜನರಲ್ ಉತ್ತರ ಕರ್ನಾಟಕ ವಲಯ ಇವರು ತತ್‌ಕ್ಷಣದ ಮೇಲಾಧಿಕಾರಿಗಳಾಗಿರುತ್ತಾರೆ.

## ದೂರದರ್ಶನ ಕೇಂದ್ರ

ಸ್ಥಳೀಯ ಸಂವೇದನೆಗಳಿಗೆ ಸ್ಪಂದಿಸುವ ಹೊಸ ದಿಶೆಯತ್ತ ಜನಪ್ರಿಯ ಕಾರ್ಯಕ್ರಮಗಳನ್ನು ಒದಗಿಸುವ ಉದ್ದೇಶದಿಂದ ದೂರದರ್ಶನ ಕೇಂದ್ರವು ಗುಲಬರ್ಗಾದಲ್ಲಿ ೧೯೭೭ ರಷ್ಟು ಹಿಂದೆಯೇ ಉಪಗ್ರಹ ಬೋಧನ ದೂರದರ್ಶನ ಪ್ರಯೋಗ (ಎಸ್.ಐ.ಟಿ.ಇ.) ಯೋಜನೆಯನ್ವಯ ಕಾರ್ಯಾರಂಭ ಮಾಡಿತು. ಪ್ರಾರಂಭದಲ್ಲಿ ಪ್ರತಿದಿನ ಒಂದು ಗಂಟೆ ಕಾರ್ಯಕ್ರಮ ಬಿತ್ತರಿಸಲಾಗುತ್ತಿತ್ತು. ೧೯೮೨ ರಿಂದ ಗುಲಬರ್ಗಾ ಕೇಂದ್ರವು ದೆಹಲಿ ಕೇಂದ್ರದ ಕಾರ್ಯಕ್ರಮಗಳನ್ನು ಮರುಪ್ರಸಾರ ಮಾಡುವ ಕಾರ್ಯ ಪ್ರಾರಂಭ ಮಾಡಿತು. ಮುಂದೆ ೧೯೯೦ ರಿಂದ ಬೆಂಗಳೂರು ದೂರದರ್ಶನ ವರ್ಣ ಕಾರ್ಯಕ್ರಮಗಳನ್ನು ಬೆಂಗಳೂರಿನಿಂದ ನೇರವಾಗಿ ಪ್ರಾದೇಶಿಕ ಪ್ರಸಾರವನ್ನು ಮರು ಪ್ರಸಾರ ಮಾಡಲು ಪ್ರಾರಂಭಿಸಿತು. ೧೪.೧೦.೯೪ ರಿಂದ ಗುಲಬರ್ಗಾ ದೂರದರ್ಶನ ಸ್ವತಂತ್ರ ಕಾರ್ಯಕ್ರಮಗಳ ನಿರ್ವಹಣೆ ಮಾಡಲಾರಂಭಿಸಿತು. ಸಧ್ಯದ ಪ್ರಸಾರ ಸಾಮರ್ಥ್ಯ ಒಂದು ಕಿ.ವ್ಯಾ. ಇದ್ದು ೧೦ ಕಿ.ವ್ಯಾಗೆ ಹೆಚ್ಚಲಿದೆ. ಅದರಂತೆ ಪ್ರಸಾರ ವ್ಯಾಪ್ತಿ ೩೫ ಕಿ.ಮೀ. ಗಳಿಂದ ೭೦ ಕಿ.ಮೀ.ಗೆ ಹೆಚ್ಚಲಿದೆ. ಪ್ರಾರಂಭಗೊಂಡಾಗ ಕೇಂದ್ರ ಮುಖ್ಯಾಧಿಕಾರಿಗಳನ್ನು ಅಧಿಕಾರಿಗಳು ವಿಶೇಷ ಕಾರ್ಯ ಎಂದು ಕರೆಯಲಾಗುತ್ತಿತ್ತು. ೧೯೯೩ ರಿಂದ ಸ್ಟೇಶನ್ ಡೈರೆಕ್ಟರ್ ಹಾಗೂ ಪ್ರಸ್ತುತ ನಿರ್ದೇಶಕರು ದೂರದರ್ಶನ ಕೇಂದ್ರ ಎಂದು ಬದಲಾವಣೆಗೊಂಡಿದೆ.

ಗುಲಬರ್ಗಾ ಪ್ರದೇಶಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಯೋಜಿಸುವುದು ಹಾಗೂ ತಯಾರಿಸುವುದು ಕೇಂದ್ರದ ಮುಖ್ಯ ಉದ್ದೇಶವಾಗಿದೆ. ಒಟ್ಟು ೧೨೮ ಜನ ಸಿಬ್ಬಂದಿ ಈ ಕೇಂದ್ರದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಮರು ಪ್ರಸಾರದ ಜೊತೆ ವಾರಕ್ಕೊಮ್ಮೆ ಅರ್ಧ ಗಂಟೆ ಅವಧಿಯ ಸ್ಥಳೀಯ ಪ್ರತಿಭೆಯನ್ನು ಬಿಂಬಿಸುವ ಕಾರ್ಯಕ್ರಮಗಳನ್ನು ಗುಲಬರ್ಗಾ ನೆಲದ ಹಿರಿಮೆ, ದೃಶ್ಯ ಮಾಧ್ಯಮದಲ್ಲಿ ಸಮರ್ಥವಾಗಿ ರೂಪಿಸುವ ಕಾರ್ಯಕ್ರಮಗಳ ಪ್ರಸಾರದ ಹೊಣೆಯನ್ನು ಈ ಕೇಂದ್ರ ನಿರ್ವಹಿಸುತ್ತಿವೆ.

## ಸಹಾಯಕ ಭವಿಷ್ಯ ನಿಧಿ ಆಯುಕ್ತರ ಕಛೇರಿ

ಸಹಾಯಕ ಭವಿಷ್ಯ ನಿಧಿ ಆಯುಕ್ತರ ಉಪ-ಪ್ರಾದೇಶಿ ಕಛೇರಿಯು ಗುಲಬರ್ಗಾದಲ್ಲಿ ೧೯೮೭ ರಲ್ಲಿ ಕಾರ್ಯಾರಂಭ ಮಾಡಿದೆ. ಸಹಾಯಕ ಭವಿಷ್ಯ ನಿಧಿ ಆಯುಕ್ತರು ಕಛೇರಿಯ ಮುಖ್ಯಾಧಿಕಾರಿಗಳಾಗಿದ್ದು ಅವರು ಬೀದರ್, ಗುಲಬರ್ಗಾ, ರಾಯಚೂರು ಹಾಗೂ ಬಿಜಾಪುರ ಜಿಲ್ಲೆಗಳ ಆಡಳಿತಾಧಿಕಾರವನ್ನು ಹೊಂದಿರುವರು. ಸಂಘಟಿತ ಕಾರ್ಮಿಕ ವರ್ಗದವರಿಗೆ ಸಾಮಾಜಿಕ ಭದ್ರತೆ ಒದಗಿಸುವ ಉದ್ದೇಶ ಹೊಂದಿರುವ ಕೇಂದ್ರ ಸರ್ಕಾರದ ಕಾರ್ಮಿಕ ಮಂತ್ರಾಲಯವು ೧೯೫೨ರ ಕಾರ್ಮಿಕ ಕ್ಷೇಮ ಕಾಯ್ದೆಗನುಗುಣವಾಗಿ ಈ ಇಲಾಖಾ ಕಛೇರಿ ರೂಪುಗೊಂಡಿದೆ. ನೌಕರರ ಭವಿಷ್ಯ ನಿಧಿ ಕಾಯ್ದೆ ೧೯೫೨, ಭವಿಷ್ಯ ನಿಧಿ ಯೋಜನೆ (ಸ್ಕೀಮ್) ೧೯೫೨. ನೌಕರ ಪಿಂಚಣಿ ಯೋಜನೆ ೧೯೯೫ ಹಾಗೂ ಇನ್ನಿತರ ಅಧಿನಿಯಮಗಳನ್ನು ಈ ಕಛೇರಿ ತನ್ನ ಕಾರ್ಯದಲ್ಲಿ ಅನ್ವಯಗೊಳಿಸುತ್ತಿದೆ.

ಸಂಘಟಿತ ಕಾರ್ಮಿಕ ವರ್ಗದವರು ನೀಡಿದ ಅವರ ಉಳಿತಾಯ ಹಣದ ಭವಿಷ್ಯ ನಿಧಿ ವಂಚಿಕೆ ಹಣದಿಂದ ನೌಕರರ ಅವಶ್ಯಕತೆಗನುಗುಣವಾಗಿ ಅವರಿಗೆ ಹಣಕಾಸಿನ ನೆರವು ಒದಗಿಸುವುದು. ಸೇವೆಯಿಂದ ನಿವೃತ್ತರಾದ ಕೆಲಸಗಾರರಿಗೆ ಪಿಂಚಣಿ ಸೌಲಭ್ಯ ಹಾಗೂ ಆರ್ಥಿಕ ನೆರವು ಮುಂತಾದ ಕಾರ್ಯಚಟುವಟಿಕೆಗಳು ಈ ಕಾರ್ಯಾಲಯದ್ದಾಗಿವೆ. ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತರು, ಕರ್ನಾಟಕ, ಬೆಂಗಳೂರು ಇವರು ತತ್‌ಕ್ಷಣದ ಮೇಲಾಧಿಕಾರಿಗಳಾಗಿರುತ್ತಾರೆ.